ಈ 'ಮೋಸ್ಟ್ ಇಂಪಾರ್ಟೆಂಟ್ ಟರ್ಮ್ಸ್ ಆ್ಯಂಡ್ ಕಂಡೀಶನ್ಸ್' ('ಎಮ್‌ಐಟಿಸಿ') ಎಲ್ಲಾ ಕ್ರೆಡಿಟ್ ಕಾರ್ಡ್ಸ್/ಕಾರ್ಡ್‌ಮೆಂಬರ್ಸ್/ಕ್ರೆಡಿಟ್ ಕಾರ್ಡ್ ಅರ್ಜಿದಾರರು/ಯಸ್ ಬ್ಯಾಂಕ್‌ನ ಗ್ರಾಹಕರು/ಯಸ್ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್ ಪ್ರಾಡಕ್ಟ್‌ಗಳಲ್ಲಿ ಆಸಕ್ತಿ ತೋರುವ ಜನಸಾಮಾನ್ಯರಿಗೆ ಅನ್ವಯಿಸುತ್ತವೆ. ಯಸ್ ಬ್ಯಾಂಕ್‌ನ ನಿಷ್ಕರ್ಷೆಯ ಅನುಸಾರ ಮತ್ತು ಸಮಯ-ಸಮಯಾನುಸಾರ ಚಲಾವಣೆಯಲ್ಲಿರುವ ಕಾನೂನುಗಳ ಅನುಸಾರ ಈ ಎಮ್‌ಐಟಿಸಿಗಳು ಪರಿವರ್ತನೆಗೆ ಬದ್ಧವಾಗಿವೆ ಮತ್ತು ಇವು ಕಾರ್ಡ್‌ಮೆಂಬರ್ ಅಗ್ರೀಮೆಂಟ್‌ನ ('ಕಾರ್ಡ್‌ಮೆಂಬರ್ ಅಗ್ರೀಮೆಂಟ್') ನಿಯಮ ಹಾಗೂ ಷರತ್ತುಗಳಿಗೆ ಅತಿರಿಕ್ತವಾಗಿದ್ದು ಅವುಗಳ ಸಂಗಡ ಓದಬೇಕಾಗುತ್ತದೆ. ಎಮ್‌ಐಟಿಸಿ ಹಾಗೂ ಕಾರ್ಡ್‌ಮೆಂಬರ್ ಅಗ್ರೀಮೆಂಟ್‌ನ ನಡುವೆ ಏನಾದರೂ ವಿರೋಧಾಭಾಸವಿದ್ದಲ್ಲಿ, ಈ ಕೆಳಗೆ ನಿರ್ದಿಷ್ಟವಾಗಿ ಸೂಚಿಸಿರುವುದರ ಹೊರತಾಗಿ ಕಾರ್ಡ್‌ಮೆಂಬರ್ ಅಗ್ರೀಮೆಂಟ್ ಅಂತಿಮವೆಂದು ಪರಿಗಣಿಸಲಾಗುತ್ತದೆ.

ಇಲ್ಲಿ ಬಳಸಲಾದ, ಆದರೆ ಅರ್ಥೈಸಿಲ್ಲದ ಎಲ್ಲಾ ಕ್ಯಾಪಿಟಲೈಜ್ಡ್ ವ್ಯಾಖ್ಯೆಗಳು ಕಾರ್ಡ್ ಎಗ್ರೀಮೆಂಟ್‌ನ ಅಂತರ್ಗತ ಅವುಗಳಿಗೆ ನೀಡಲಾದ ಅರ್ಥವನ್ನು ಹೊಂದಿರುತ್ತವೆ.

## 1. ಫೀ ಹಾಗೂ ಚಾರ್ಜ್‌ಗಳು

### ಅ. ವಾರ್ಷಿಕ ಮೆಂಬರ್‌ಶಿಪ್ ಫೀ

ವಾರ್ಷಿಕ ಮೆಂಬರ್‌ಶಿಪ್ ಫೀ ಪ್ರೈಮರಿ ಹಾಗೂ ಆ್ಯಡ್-ಆನ್ ಕಾರ್ಡ್‌ಗೆ(ಗಳಿಗೆ) ಅನ್ವಯಿಸುತ್ತದೆ ಕಾರ್ಡ್‌ಮೆಂಬರ್‌ಗೆ ಯಾವ ಆಫರ್‌ನ ಅಂತರ್ಗತ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ನೀಡಲಾಗಿದೆ ಎಂಬುದನ್ನು ಅವಲಂಬಿಸಿ. ಈ ಶುಲ್ಕಗಳಲ್ಲಿ ವ್ಯತ್ಯಾಸವಿರಬಹುದು. ಇದನ್ನು ಕಾರ್ಡ್‌ಮೆಂಬರ್‌ಗೆ ಕ್ರೆಡಿಟ್ ಕಾರ್ಡ್ ಅರ್ಜಿಯ ಸಮಯದಲ್ಲೇ ಸೂಚಿಸಲಾಗುತ್ತದೆ. ವಾರ್ಷಿಕ ಮೆಂಬರ್‌ಶಿಪ್ ಫೀಯು ಪ್ರೈಮರಿ ಹಾಗೂ ಆ್ಯಡ್-ಆನ್ ಕ್ರೆಡಿಟ್ ಕಾರ್ಡ್‌ಗೆ(ಗಳಿಗೆ) ಅನ್ವಯಿಸುತ್ತದೆ. ಯಾವ ಆಫರ್‌ನ ಅಂತರ್ಗತ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡನ್ನು ಕಾರ್ಡ್‌ಮೆಂಬರ್ ಪಡೆದಿರುವರೋ ಅದನ್ನು ಅವಲಂಬಿಸಿ ಈ ಫೀಯಲ್ಲಿ ವ್ಯತ್ಯಾಸವಿರಬಹುದು. ಯಾವುದೇ ಆ್ಯಡ್-ಆನ್ ಕಾರ್ಡ್‌ನ(ಗಳ) ಫೀಯನ್ನು ಸೇರಿಕೊಂಡು ಈ ಫೀಸ್‌ನ್ನು ಕಾರ್ಡ್‌ಮೆಂಬರ್‌ಗೆ ಅನ್ವಯಿಸುವ ಅನುಸಾರ ಕಾರ್ಡ್ ಇಶ್ಯೂ ಮಾಡುವಾಗ/ರಿನ್ಯೂ ಮಾಡುವಾಗ ಅವರ ಕ್ರೆಡಿಟ್ ಕಾರ್ಡ್ ಅಕೌಂಟ್‌ಗೆ ಬಿಲ್ ಮಾಡಲಾಗುತ್ತದೆ ಮತ್ತು ಯಾವ ತಿಂಗಳಲ್ಲಿ ಅವನ್ನು ಬಿಲ್ ಮಾಡಲಾಗಿದೆಯೋ ಆ ತಿಂಗಳ ಕ್ರೆಡಿಟ್ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ಅವು ಕಾಣಿಸುತ್ತವೆ. ಕಾರ್ಡ್ ಮುಕ್ತಾಯಗೊಂಡಾಗ ಯಾವುದೇ ಫೀಸನ್ನು ಹಿಂತಿರುಗಿಸಲಾಗುವುದಿಲ್ಲ,

### ಆ. ಕ್ಯಾಶ್ ಅಡ್ವಾನ್ಸ್ ಫೀಸ್

ಕಾರ್ಡ್‌ಮೆಂಬರ್ ಕ್ರೆಡಿಟ್ ಕಾರ್ಡನ್ನು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಹಗಲು-ರಾತ್ರಿ ಎಟಿಎಮ್‌ಗಳಿಂದ ನಗದು ಪಡೆಯಲಿಕ್ಕಾಗಿ ಬಳಸಬಹುದು. ನಗದು ಹಣ ತೆಗೆದಾಗ ಆ ಮೊಬಲಗಿನ 2.5% ಟ್ರಾನ್ಸ್ಯಾಕ್ಷನ್ ಫೀ (ಕನಿಷ್ಟ ₹300) ಮುಂದಿನ ತಿಂಗಳ ಬಿಲ್‌ನಲ್ಲಿ ಚಾರ್ಜ್ ಮಾಡಲಾಗುತ್ತದೆ. ಈ ಟ್ರಾನ್ಸ್ಯಾಕ್ಷನ್ ಫೀ ಯಸ್ ಬ್ಯಾಂಕ್‌ನ ಏಕೈಕ ನಿಷ್ಕರ್ಷೆಯ ಮೇರೆಗೆ ಬದಲಾಗುವುದು ಸಾಧ್ಯವಿದೆ. ಎಲ್ಲಾ ಕ್ಯಾಶ್ ಅಡ್ವಾನ್ಸ್ ವ್ಯವಹಾರಗಳ ಮೇಲೆ ಹಣ ತೆಗೆದ ದಿನದಿಂದ ಹಣವನ್ನು ಪೂರ್ತಿಯಾಗಿ ಸಂದಾಯ ಮಾಡುವ ದಿನಾಂಕದ ವರೆಗಿನ ಅವಧಿಗಾಗಿ ರಿವಾಲ್ವಿಂಗ್ ಕ್ರೆಡಿಟ್‌ಗೆ (ದಯವಿಟ್ಟು ಚಾರ್ಜ್‌ಗಳ ಶೆಡ್ಯೂಲನ್ನು ನೋಡಿರಿ) ಸಮಾನ ಮೊಬಲಗನ್ನು ಫೈನಾನ್ಸ್ ಚಾರ್ಜ್‌ನ ರೂಪದಲ್ಲಿ ಹೇರಲಾಗುತ್ತದೆ. ಅನ್ವಯಿಸುವ ಫೈನಾನ್ಸ್ ಚಾರ್ಜ್ ಯಸ್ ಬ್ಯಾಂಕ್‌ನ ಏಕೈಕ ನಿಷ್ಕರ್ಷೆಯ ಮೇರೆಗೆ ಬದಲಾಗುವುದು ಸಾಧ್ಯವಿದೆ.

### ಇ. ಇತರ ಚಾರ್ಜ್‌ಗಳು

- ಕಾರ್ಡ್‌ಮೆಂಬರ್‌ಗೆ ಯಸ್ ಬ್ಯಾಂಕ್ ನೀಡುವ ನಿರ್ದಿಷ್ಟವಾದ ಸೇವೆಗಾಗಿ ಅಥವಾ ಕಾರ್ಡ್‌ಮೆಂಬರ್ ಆತನ/ಆಕೆಯ ಕಾರ್ಡ್ ಅಕೌಂಟಿಗೆ ಸಂಬಂಧಪಟ್ಟಂತೆ ತಪ್ಪಿತಸ್ಥರಾದರೆ ಸಮಯೋಚಿತವಾಗಿ ಅನ್ವಯಿಸಬಹುದಾದ ಫೀ ಮತ್ತು ಚಾರ್ಜ್‌ಗಳನ್ನು ಕಾರ್ಡ್‌ಮೆಂಬರ್ ಸಲ್ಲಿಸಬೇಕಾಗುತ್ತದೆ.
- ಹಣ ಸಂದಾಯದ ನಿಗದಿತ ತಾರೀಖಿನ ಒಳಗೆ ಸಂದಾಯ ಮಾಡಬೇಕಾಗುವ ಕನಿಷ್ಠ ಮೊಬಲಗನ್ನು ಸಂದಾಯ ಮಾಡದೇ ಇದ್ದರೆ ಲೇಟ್ ಪೇಮೆಂಟ್ ಚಾರ್ಜ್‌ಗಳು ಅನ್ವಯಿಸುತ್ತವೆ. ಅನ್ವಯಿಸುವ ಲೇಟ್ ಪೇಮೆಂಟ್ ಚಾರ್ಜ್‌ಗಳು ಈ ಕೆಳಗಿನಂತಿವೆ:

| ಸ್ಟೇಟ್‌ಮೆಂಟ್ ಬ್ಯಾಲೆಂಸ್ | ಲೇಟ್ ಪೇಮೆಂಟ್ ಚಾರ್ಜ್ |
|---|---|
| ₹100/- ಕ್ಕಿಂತ ಕಡಿಮೆ | ಶೂನ್ಯ |
| ₹100/- ರಿಂದ ₹500/- | ₹100/- |
| ₹501/- ರಿಂದ ₹5,000/- | ₹400/- |
| ₹5,001/- ರಿಂದ ₹20,000/- | ₹500/- |
| ₹20,000/- ಮತ್ತು ಅದಕ್ಕೂ ಹೆಚ್ಚು | ₹700/- |

- ಎಲ್ಲಾ ಫೀಸ್ ಹಾಗೂ ಚಾರ್ಜ್‌ಗಳ ಮೇಲೆ ಗೂಡ್ಸ್ ಆ್ಯಂಡ್ ಸರ್ವಿಸ್ ಟ್ಯಾಕ್ಸ್ (ಜಿಎಸ್‌ಟಿ) ಸದ್ಯಕ್ಕೆ ಚಲಾವಣೆಯಲ್ಲಿರುವ ಪರೋಕ್ಷ ಕರದ ಅಂತರ್ಗತ ತೆರಿಗೆಗೆ ಬದ್ಧವಾದ ಇತರ ಮೊಬಲಗುಗಳನ್ನೂ ಹೇರಲಾಗುತ್ತದೆ. (ಗೂಡ್ಸ್ ಆ್ಯಂಡ್ ಸರ್ವಿಸ್ ಟ್ಯಾಕ್ಸ್ (ಜಿಎಸ್‌ಟಿ) ಜುಲೈ 1, 2017ರಿಂದ ಅನ್ವಯಿಸುತ್ತದೆ)
- ಸಮಯೋಚಿತವಾಗಿ ಆವಶ್ಯಕತೆಗೆ ತಕ್ಕಂತೆ, ಯಾವುದೇ ಫೀಸ್ ಅಥವಾ ಚಾರ್ಜ್‌ಗಳನ್ನು ಬದಲಾಯಿಸುವ ಅಥವಾ ಹೊಸ ಫೀಸ್ ಅಥವಾ ಚಾರ್ಜ್‌ಗಳನ್ನು ತರುವ ಅಧಿಕಾರವನ್ನು ಯಸ್ ಬ್ಯಾಂಕ್ ಕಾದಿರಿಸಿಕೊಂಡಿದೆ. ಇಂಥ ಚಾರ್ಜ್‌ಗಳನ್ನು 30 ದಿನಗಳ ನೋಟೀಸನ್ನಿತ್ತು ಮುಂದಿನ ದಿನಾಂಕದಿಂದ ಜ್ಯಾರಿಪಡಿಸಲಾಗುತ್ತದೆ.

### ಈ. ಬಡ್ಡಿ ರಹಿತ ಕಾಲಾವಧಿ

ನಿರ್ದಿಷ್ಟವಾದ ಕ್ರೆಡಿಟ್ ಕಾರ್ಡ್‌ಗೆ ಅನ್ವಯಿಸುವ ಸ್ಕೀಮನ್ನು ಅವಲಂಬಿಸಿ ಕಾರ್ಡ್‌ಮೆಂಬರ್ 50 ದಿನಗಳ ವರೆಗಿನ ಬಡ್ಡಿ ರಹಿತ ಕ್ರೆಡಿಟ್ ಕಾಲಾವಧಿಯನ್ನು ಪಡೆಯುತ್ತಾರೆ (ಇದರೊಂದಿಗೆ ಲಗತ್ತಿಸಿರುವ ಚಾರ್ಜ್‌ಗಳ ಶೆಡ್ಯೂಲನ್ನು ದಯವಿಟ್ಟು ನೋಡಿರಿ). ಆದರೆ, ಕಳೆದ ತಿಂಗಳ ಸ್ಟೇಟ್‌ಮೆಂಟ್ ಬ್ಯಾಲೆಂಸನ್ನು ಪೂರ್ತಿಯಾಗಿ ಅಥವಾ ಸಂದಾಯ ದಿನಾಂಕದ ಮೊದಲೇ ಸಂದಾಯ ಮಾಡದೇ ಇದ್ದರೆ ಬಡ್ಡಿ ರಹಿತ ಕಾಲಾವಧಿಯು ಅನ್ವಯಿಸಲಾರದು. ಕಾರ್ಡ್‌ಮೆಂಬರ್ ಎಟಿಎಮ್‌ನಿಂದ ಹಣ ತೆಗೆದಿದ್ದಾಗಲೂ ಈ ಸ್ಕೀಮ್ ಅನ್ವಯಿಸುವುದಿಲ್ಲ.

ಬಡ್ಡಿ ರಹಿತ ಕ್ರೆಡಿಟ್ ಕಾಲಾವಧಿಯ ಲೆಕ್ಕಾಚಾರಕ್ಕಾಗಿ ಚಿತ್ರೀಕೃತ ಉದಾಹರಣೆ :

ಕ್ರೆಡಿಟ್ ಕಾರ್ಡ್‌ನ ಹಣ ಸಂದಾಯದ ಕೊನೇಯ ತಾರೀಖು ಮೇ 15 ಮತ್ತು ಕಳೆದ ತಿಂಗಳ ಬಾಕಿಯನ್ನು ಪೂರ್ತಿಯಾಗಿ ನೀಡಲಾಗಿದೆ ಎಂದು ನಾವು ಅಂದುಕೊಳ್ಳೋಣ. ಆಗ ಗ್ರೇಸ್ ಪೀರಿಯಡ್ ಆಗುತ್ತದೆ :

1. ಎಪ್ರಿಲ್ 6 ರಂದು ಮಾಡಿದ ಖರೀದಿಗಾಗಿ, ಬಡ್ಡಿ ರಹಿತ ಕ್ರೇಡಿಟ್ ಕಾಲಾವಧಿ ಎಪ್ರಿಲ್ 6 ರಿಂದ ಮೇ 25ರ ವರೆಗೆ = 50 ದಿನಗಳು
2. ಎಪ್ರಿಲ್ 17 ರಂದು ಮಾಡಿದ ಖರೀದಿಗಾಗಿ, ಬಡ್ಡಿ ರಹಿತ ಕ್ರೇಡಿಟ್ ಕಾಲಾವಧಿ ಎಪ್ರಿಲ್ 17 ರಿಂದ ಮೇ 25ರ ವರೆಗೆ = 39 ದಿನಗಳು

## 2. ಲಿಮಿಟ್‌ಗಳು

- ಯಸ್ ಬ್ಯಾಂಕ್ ತಮ್ಮ ಏಕೈಕ ನಿಷ್ಕರ್ಷೆಯ ಮೇರೆಗೆ ಕಾರ್ಡ್‌ಮೆಂಬರ್‌ಗಳ ಕ್ರೆಡಿಟ್ ಲಿಮಿಟ್ ಮತ್ತು ನಗದು ವಿದ್‌ಡ್ರಾ ಮಾಡುವ ಲಿಮಿಟ್‌ನ್ನು ನಿರ್ಧರಿಸುತ್ತದೆ (ಆ್ಯಡ್–ಆನ್ ಕಾರ್ಡ್‌ಮೆಂಬರ್‌ಗಳು ಪ್ರೈಮರಿ ಕಾರ್ಡ್‌ಮೆಂಬರ್ ಹೊಂದಿರುವ ಲಿಮಿಟನ್ನೇ ಹಂಚಿಕೊಳ್ಳುತ್ತಾರೆ). ಕ್ರೆಡಿಟ್ ಲಿಮಿಟ್ ಅಂದರೆ, ಯಾವುದೇ ಸಮಯದಲ್ಲಿ ಕ್ರೆಡಿಟ್ ಕಾರ್ಡ್ ಅಕೌಂಟ್‌ನಲ್ಲಿ ಸಂದಾಯ ಮಾಡಲು ಬಾಕಿ ಇರಬಹುದಾದ ಗರಿಷ್ಠ ಮೊಬಲಗು. ಈ ಲಿಮಿಟ್‌ಗಳನ್ನು ಕಾರ್ಡ್‌ಮೆಂಬರ್‌ಗೆ ಕಾರ್ಡನ್ನು ನೀಡುವ ಸಮಯದಲ್ಲೇ ಸೂಚಿಸಲಾಗುತ್ತದೆ ಮತ್ತು ಮಾಸಿಕ ಸ್ಟೇಟ್‌ಮೆಂಟ್‌ಗಳ ಮೂಲಕವೂ ತಿಳಿಸಲಾಗುತ್ತದೆ. ಸ್ಟೇಟ್‌ಮೆಂಟ್ ತಯಾರಿಸುವ ಸಮಯದಲ್ಲಿ ಲಭ್ಯವಿರುವ ಕ್ರೆಡಿಟ್ ಲಿಮಿಟನ್ನು ಕೂಡ ಮಾಸಿಕ ಸ್ಟೇಟ್‌ಮೆಂಟ್‌ನಲ್ಲಿ ನೀಡಲಾಗುತ್ತದೆ. ಕ್ಯಾಶ್ ಅಡ್ವಾನ್ಸ್ ಲಿಮಿಟ್ ಅಂದರೆ, ಕಾರ್ಡ್‌ಮೆಂಬರ್ ಆತನ/ಆಕೆಯ ಕ್ರೆಡಿಟ್ ಕಾರ್ಡ್ ಅಕೌಂಟ್‌ನಿಂದ ಬಳಸಬಹುದಾದ, ಯಸ್ ಬ್ಯಾಂಕ್ ನಿರ್ಧರಿಸಿದ ಅಥವಾ ಶಿಫಾರಸು ಮಾಡಿರುವ ಅನುಸಾರದ ಗರಿಷ್ಠ ನಗದು ಮೊಬಲಗು ಅಥವಾ ಅದಕ್ಕೆ ಸರಿಸಮಾನ ಮೊಬಲಗು. ಕ್ಯಾಶ್ ಲಿಮಿಟ್ ಕಾರ್ಡ್‌ಮೆಂಬರ್‌ರ ಕ್ರೆಡಿಟ್ ಲಿಮಿಟ್‌ನದ್ದೇ ಅಂಶವಾಗಿರುತ್ತದೆ. ಅನ್ವಯಿಸುವ ಕ್ಯಾಶ್ ಅಡ್ವಾನ್ಸ್ ಲಿಮಿಟನ್ನು ಅರಿಯಲು ದಯವಿಟ್ಟು ಚಾರ್ಜ್‌ಗಳ ಶೆಡ್ಯೂಲನ್ನು ನೋಡಿರಿ).
- ಸೇವೆಯ ಮನೋಭಾವನೆಯಿಂದ ಯಸ್ ಬ್ಯಾಂಕ್ ಕೆಲವೊಮ್ಮೆ ಕಾರ್ಡ್‌ಮೆಂಬರ್ ಪ್ರಯತ್ನಿಸಿದ ಕ್ರೆಡಿಟ್ ಲಿಮಿಟ್‌ಗೆ ಮೀರಿದ ವ್ಯವಹಾರವನ್ನು ಮನ್ನಿಸಬಹುದು. ಆದರೆ, ಇಂಥ ಓವರ್ ಲಿಮಿಟ್ ವ್ಯವಹಾರಕ್ಕಾಗಿ 2.5% ಅಥವಾ ₹500 (ಯಾವುದು ಹೆಚ್ಚೋ ಅದು) ಓವರ್ ಲಿಮಿಟ್ ಚಾರ್ಜ್‌ನ್ನು ನಿಮ್ಮ ಕ್ರೆಡಿಟ್ ಕಾರ್ಡ್ ಅಕೌಂಟಿಗೆ ಹೇರಲಾಗುತ್ತದೆ.
- ಯಸ್ ಬ್ಯಾಂಕ್ ನಿಯತಕಾಲಿಕವಾಗಿ ಕಾಡ್‌ಮೆಂಬರ್‌ರ ಕ್ರೆಡಿಟ್ ಕಾರ್ಡ್ ಅಕೌಂಟನ್ನು ಪುನರಾವಲೋಕಿಸುತ್ತದೆ. ಆಂತರಿಕ ಆವಶ್ಯಕತೆಗಳನ್ನು ಆಧರಿಸಿ ಯಸ್ ಬ್ಯಾಂಕ್ ತನ್ನ ಏಕೈಕ ನಿಷ್ಕರ್ಷೆಯ ಮೇರೆಗೆ ಕ್ರೆಡಿಟ್ ಲಿಮಿಟನ್ನು ಕಡಿಮೆ ಮಾಡಬಹುದು. ಇದನ್ನು ಬ್ಯಾಂಕ್ ಕಾರ್ಡ್‌ಮೆಂಬರ್‌ಗೆ ತಕ್ಷಣವೇ ಕಾರಣ ಸಹಿತವಾಗಿ ಎಸ್‌ಎಮ್‌ಎಸ್/ಈಮೇಲ್ ಮೂಲಕ ಸೂಚಿತಗೊಳಿಸುತ್ತದೆ.
- ತಮ್ಮ ಕ್ರೆಡಿಟ್ ಲಿಮಿಟ್ ಹೆಚ್ಚಿಸಬೇಕೆಂದು ಬಯಸುವ ಕಾರ್ಡ್‌ಮೆಂಬರ್ ಲಿಖಿತವಾಗಿ ಕೋರಿಕೊಳ್ಳಬೇಕು, ಸಂಗಡ ಕಾರ್ಡ್‌ಮೆಂಬರ್‌ರ ಆದಾಯವನ್ನು ಉದ್ಘೋಷಿಸುವ ಆರ್ಥಿಕ ದಸ್ತಾವೇಜುಗಳನ್ನು ಒದಗಿಸಬೇಕು. ಈ ಹೊಸ ದಸ್ತಾವೇಜುಗಳ ಆಧಾರದ ಮೇಲೆ ಕಾರ್ಡ್‌ಮೆಂಬರ್‌ರ ಕ್ರೆಡಿಟ್ ಲಿಮಿಟ್ ಹೆಚ್ಚಿಸುವುದು ಸಾಧ್ಯವಿದೆ.
- ಕ್ರೆಡಿಟ್ ಕಾರ್ಡ್‌ನ ಬಳಕೆಯೇ ಸಮಯ–ಸಮಯಕ್ಕೆ ನೀಡಲಾಗುವ ಕ್ರೇಡಿಟ್ ಲಿಮಿಟ್‌ನ ಸ್ವೀಕೃತಿಯೂ ಆಗಿದೆ ಎಂದು ಪರಿಗಣಿಸಲಾಗುತ್ತದೆ.

## 3. ಫೈನಾನ್ಸ್ ಚಾರ್ಜ್‌ಗಳು

- ಕಾರ್ಡ್‌ಮೆಂಬರ್ ಬಾಕಿ ಇರುವ ಪೂರ್ತಿ ಮೊಬಲಗನ್ನು ಮತ್ತು ಕಾರ್ಡ್‌ಮೆಂಬರ್ ತಾನು ಪಡೆದಿರುವ ಎಲ್ಲಾ ಕ್ಯಾಶ್ ಅಡ್ವಾನ್ಸನ್ನು ಸಂದಾಯ ಮಾಡಲು ಬಯಸದೆ ಇರುವಾಗ ಅವರು ಮಾಡಿದ ಎಲ್ಲಾ ವ್ಯವಹಾರಗಳಿಗಾಗಿ ಅಂಥ ವ್ಯವಹಾರದ ತಾರೀಖಿನಿಂದ ಅವನ್ನು ಮರುಸಂದಾಯ ಮಾಡುವ ವರೆಗೆ ಫೈನಾನ್ಸ್ ಚಾರ್ಜ್‌ಗಳನ್ನು,ಮಾಸಿಕ ಪ್ರತಿಶತ ದರದಲ್ಲಿ ನೀಡಬೇಕಾಗುತ್ತದೆ. ಸಂದಾಯ ಮಾಡಬೇಕಾದ ಫೈನಾನ್ಸ್ ಚಾರ್ಜ್‌ಗಳೇನಾದರೂ ಇದ್ದರೆ, ಅವನ್ನು ಕಾರ್ಡ್‌ನ ಎಲ್ಲಾ ಬಾಕಿಯನ್ನು ಪೂರ್ತಿಯಾಗಿ ಹಿಂತಿರುಗಿಸುವ ವರೆಗೆ ಕಾರ್ಡ್‌ಮೆಂಬರ್‌ರ ಅಕೌಂಟಿಗೆ ಡೆಬಿಟ್ ಮಾಡಲಾಗುತ್ತದೆ.
- ಕ್ಯಾಶ್ ಅಡ್ವಾನ್ಸ್‌ಗಳ ಮೇಲಿನ ಫೈನಾನ್ಸ್ ಚಾರ್ಜ್‌ಗಳು ವ್ಯವಹಾರದ ದಿನಾಂಕದಿಂದ ಪೂರ್ತಿ ಹಣ ಸಂದಾಯವಾಗುವ ವರೆಗೆ ಅನ್ವಯಿಸುತ್ತವೆ.
- ಯಾವುದೇ ಬಾಕಿ ಇರುವ ಮೊಬಲಗನ್ನು ಕಾರ್ಡ್‌ಮೆಂಬರ್ ಕ್ಯಾರಿ ಫಾರ್ವರ್ಡ್ ಮಾಡಿದಾಗ ಅಥವಾ ಕ್ಯಾಶ್ ಅಡ್ವಾನ್ಸ್ ಪಡೆದಾಗ, ಸರಾಸರಿ ಡೇಲೀ ಬ್ಯಾಲೆನ್ಸ್ ಪದ್ಧತಿಯಲ್ಲಿ ಲೆಕ್ಕ ಮಾಡಲಾದಾಗ, ಕ್ಯಾರಿ ಫಾರ್ವರ್ಡ್ ಮಾಡಲಾದ ಬ್ಯಾಲೆನ್ಸ್ ಹಾಗೂಹೊಸ ಬಿಲ್ಲಿಂಗ್‌ಗಳಿಗೆ, ಹಿಂದಿನ ಬಾಕಿಯನ್ನೆಲ್ಲಾ ಪೂರ್ತಿಯಾಗಿ ಸಂದಾಯ ಮಾಡುವ ವರೆಗೆ ಫೈನಾನ್ಸ್ ಚಾರ್ಜ್ ಅನ್ವಯಿಸುತ್ತದೆ.
- ಫೈನಾನ್ಸ್ ಚಾರ್ಜ್ ಮತ್ತು ಇತರ ಚಾರ್ಜ್‌ಗಳು ಯಸ್ ಬ್ಯಾಂಕ್‌ನ ಏಕೈಕ ನಿಷ್ಕರ್ಷೆಯ ಮೇರೆಗೆ ಬದಲಾಗುವುದು ಸಾಧ್ಯವಿದೆ.

**ರಿವಾಲ್ವಿಂಗ್ ಕ್ರೆಡಿಟ್‌ನ ಮೇಲೆ ಫೈನಾನ್ಸ್ ಚಾರ್ಜ್‌ಗಳ ಲೆಕ್ಕಾಚಾರವನ್ನು ಅರ್ಥ ಮಾಡಿಕೊಳ್ಳಲು ದಯವಿಟ್ಟು ಈ ಕೆಳಗಿನ ಚಿತ್ರೀಕರಣವನ್ನು ನೋಡಿರಿ.**

| ತಾರೀಖು | ವ್ಯವಹಾರ | ಮೊಬಲಗು |
|---|---|---|
| 2ನೇ ಜೂನ್ | ಬಟ್ಟೆಬರೆ ಖರೀದಿ | ₹5000 |
| 14ನೇ ಜೂನ್ | ಗ್ರೋಸರಿ ಖರೀದಿ | ₹1000 |
| 20ನೇ ಜೂನ್ | ಸ್ಟೇಟ್‌ಮೆಂಟ್ ದಿನಾಂಕ | ಒಟ್ಟು ಬಾಕಿ ಹಣ = ₹6000 ಕನಿಷ್ಠ ಸಲ್ಲಿಸಬೇಕಾದ ಮೊತ್ತ = ₹300 |
| 10ನೇ ಜುಲೈ | ಕಾರ್ಡ್ ಅಕೌಂಟಿಗೆ ಹಣ ಸಂದಾಯ | ₹1000 (ಕ್ರೆಡಿಟ್) |
| 14ನೇ ಜುಲೈ | ಗ್ರೋಸರಿ ಖರೀದಿ | ₹1000 |
| 20ನೇ ಜುಲೈ | ಸ್ಟೇಟ್‌ಮೆಂಟ್ ದಿನಾಂಕ | ಒಟ್ಟು ಬಾಕಿ ಹಣ = ₹6296.59 ಕನಿಷ್ಠ ಸಲ್ಲಿಸಬೇಕಾದ ಮೊತ್ತ = ₹314.8 |

ಕಾರ್ಡ್‌ಮೆಂಬರ್ ತನ್ನ ಹಿಂದಿನ ಬಾಕಿ ಎಲ್ಲವನ್ನೂ ಪೂರ್ತಿಯಾಗಿ ಸಂದಾಯ ಮಾಡಿದ್ದಾರೆ ಮತ್ತು ಆತನ/ಆಕೆಯ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅಕೌಂಟ್‌ನಲ್ಲಿ ಯಾವ ಮೊತ್ತವೂ ಬಾಕಿ ಇಲ್ಲವೆಂದು ಇಲ್ಲಿ ಪರಿಗಣಿಸಲಾಗಿದೆ. ಕಾರ್ಡ್‌ಮೆಂಬರ್‌ರ ಸ್ಟೇಟ್‌ಮೆಂಟ್ ದಿನಾಂಕ ಪ್ರತಿ ತಿಂಗಳ 20ನೇ ತಾರೀಖು. ಈ ಕೆಳಗೆ ನೀಡಿರುವುದು ಕಾರ್ಡ್‌ಮೆಂಬರ್ ಆತನ/ಆಕೆಯ ಕಾರ್ಡ್ ಅಕೌಂಟ್‌ನಲ್ಲಿ ಮಾಡಿದ ವ್ಯವಹಾರಗಳ ಯಾದಿ.

ಜುಲೈ 20ರ ಸ್ಟೇಟ್‌ಮೆಂಟ್‌ನಲ್ಲಿ ಕಾರ್ಡ್‌ಮೆಂಬರ್ ನೀಡಬೇಕಾಗುವ ಒಟ್ಟು ಮೊಬಲಗಿನ ಅಂಶಗಳೆಂದು ಈಕೆಳಗಿನವು ಕಂಡುಬರುತ್ತವೆ :

ಬಡ್ಡಿಯ ಲೆಕ್ಕಾಚಾರ = (ಬಾಕಿ ಇರುವ ಮೊಬಲಗು x 2.75% ಮಾಸಿಕ x 12 ತಿಂಗಳು X ದಿನಗಳ ಸಂಖ್ಯೆ)/365

A) ₹5000ದ ಮೇಲೆ 2ನೇ ಜೂನ್‌ನಿಂದ 9ನೇ ಜುಲೈ ವರೆಗೆ (38 ದಿನಗಳು) @ 2.75% ಮಾಸಿಕದಂತೆ ಬಡ್ಡಿ = ₹171.78

₹1000ದ ಮೇಲೆ 14ನೇ ಜೂನ್‌ನಿಂದ 9ನೇ ಜುಲೈ ವರೆಗೆ (26 ದಿನಗಳು) @ 2.75% ಮಾಸಿಕದಂತೆ ಬಡ್ಡಿ = ₹23.51

₹5000ದ ಮೇಲೆ 10ನೇ ಜುಲೈಯಿಂದ 20ನೇ ಜುಲೈ ವರೆಗೆ (11 ದಿನಗಳು) @ 2.75% ಮಾಸಿಕದಂತೆ ಬಡ್ಡಿ = ₹49.73

₹1000ದ ಮೇಲೆ (ಹೊಸ ಖರೀದಿಗಳು) @ 2.75%, 14ನೇ ಜುಲೈಯಿಂದ 20ನೇ ಜುಲೈ ವರೆಗೆ (7 ದಿನಗಳು) = ₹6.33

ಮಾಸಿಕದಂತೆ ಬಡ್ಡಿ = ₹251.35

B) 18% ಗೂಡ್ಸ್ ಆ್ಯಂಡ್ ಸರ್ವಿಸ್ ಟ್ಯಾಕ್ಸ್ ಬಡ್ಡಿಯ ಮೊತ್ತದ ಮೇಲೆ = ₹45.24

C) ಬಾಕಿ ಇರುವ ಒಟ್ಟು ಮೂಲ ಮೊಬಲಗು = ₹6000 (₹1000 ಹೊಸ ವೆಚ್ಚ + ಹಿಂದಿನ ತಿಂಗಳ ಬಿಲ್‌ನಿಂದ ಸಂದಾಯ ಮಾಡದೇ ಇರುವ ಬಾಕಿ ₹5000)

ಆದ್ದರಿಂದ ಬಾಕಿಯಾಗುವ ಒಟ್ಟು ಮೊಬಲಗು = (A) + (B) + (C) = ₹6296.59

## 4. ಬಿಲ್ಲಿಂಗ್

- ಯಸ್ ಬ್ಯಾಂಕ್ ಪ್ರತಿ ತಿಂಗಳಲ್ಲೂ ಕಾರ್ಡ್ ಮೆಂಬರ್‌ಗೆ ಹಿಂದಿನ ಸ್ಟೇಟ್‌ಮೆಂಟ್‌ನ ನಂತರ ಕ್ರೆಡಿಟ್ ನೀಡಲಾದ ಪೇಮೆಂಟ್‌ಗಳು ಮತ್ತು ಕಾರ್ಡ್ ಅಕೌಂಟಿಗೆ ಡೆಬಿಟ್ ಮಾಡಲಾದ ವ್ಯವಹಾರಗಳ ಮಾಸಿಕ ಸ್ಟೇಟ್‌ಮೆಂಟನ್ನು ಕಾರ್ಡ್ ಮೆಂಬರ್‌ಗೆ ಕಳಿಸುತ್ತದೆ. ಕಾರ್ಡ್ ಅಕೌಂಟ್‌ನಲ್ಲಿ ಮಾಡಲಾದ ವ್ಯವಹಾರಗಳ ಈ ಸ್ಟೇಟ್‌ಮೆಂಟನ್ನು ಯಸ್ ಬ್ಯಾಂಕ್ ಪ್ರತಿ ತಿಂಗಳ ನಿಗದಿತಗೊಳಿಸಲಾದ ಒಂದು ದಿನದಲ್ಲಿ ಯಸ್ ಬ್ಯಾಂಕ್‌ನ ಬಳಿ ಇರುವ ವಿಳಾಸಕ್ಕೆ/ಈಮೇಲ್ ವಿಳಾಸಕ್ಕೆ ರವಾನಿಸುತ್ತದೆ. ಬಾಕಿ ಇರುವ ಬ್ಯಾಲೆನ್ಸ್ ₹100/- ಕ್ಕಿಂತ ಕಡಿಮೆ ಇದ್ದು ಕೊನೇಯ ಸ್ಟೇಟ್‌ಮೆಂಟ್‌ನ ನಂತರ ಇನ್ನೇನೂ ಬಿಲ್ಲಿಂಗ್ ಮಾಡಬೇಕಾದ ವ್ಯವಹಾರ ನಡೆದಿಲ್ಲವೆಂದಾದರೆ, ಯಾವ ಸ್ಟೇಟ್‌ಮೆಂಟನ್ನೂ ಕಳಿಸಲಾಗುವುದಿಲ್ಲ.
- ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ರಿವೋಲ್ವಿಂಗ್ ಕ್ರೆಡಿಟ್‌ನ ಸೌಲಭ್ಯವನ್ನು ಕಾರ್ಡ್ ಮೆಂಬರ್‌ಗೆ ಒದಗಿಸುತ್ತದೆ. ಕಾರ್ಡ್ ಮೆಂಬರ್ ಕನಿಷ್ಠ ಸಲ್ಲಿಸಬೇಕಾದ ಮೊತ್ತ ಅಥವಾ ಮಿನಿಮಮ್ ಅಮೌಂಟ್ ಡ್ಯೂ (MAD) ಮಾತ್ರವೇ ಸಂದಾಯ ಮಾಡಲು ಆರಿಸಿಕೊಳ್ಳಬಹುದು, ಬಾಕಿ ಇರುವ ಎಲ್ಲಾ ಮೊಬಲಗು ಅಥವಾ ಕ್ರೆಡಿಟ್ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಿರುವ ಎಮ್ಎಡಿಗೆ ಮೀರುವ, ಆದರ ಯಾವುದೇ ಅಂಶವನ್ನು ಸಂದಾಯ ಮಾಡಬಹುದು. ಆನಂತರ ಬಾಕಿ ಉಳಿಯುವ ಮೊಬಲಗನ್ನು ಮುಂದಿನ ಸ್ಟೇಟ್‌ಮೆಂಟಿಗೆ ಕ್ಯಾರಿ ಫಾರ್ವರ್ಡ್ ಮಾಡಬಹುದು. ಅಂಥ ಹಣ ಸಂದಾಯವನ್ನು ಸಲ್ಲಿಸಲಿಕ್ಕಾಗಿ ಕೊನೆಯ ದಿನಾಂಕದ ಅಂದರೆ ಪೇಮೆಂಟ್ ಡ್ಯೂ ಡೇಟ್‌ನ ಮೊದಲೇ ಸಂದಾಯ ಮಾಡಬೇಕು.
- ಕರೆಂಟ್ ಮಿನಿಮಮ್ ಅಮೌಂಟ್ ಡ್ಯೂ ಅನ್ನು ಬಾಕಿ ಇರುವ ಬ್ಯಾಲೆನ್ಸ್‌ನ 5% ಅಥವಾ ₹100 (ಇವುಗಳಲ್ಲಿ ಯಾವುದು ಹೆಚ್ಚೋ ಅದು) ಎಂದು ಲೆಕ್ಕಾಚಾರ ಮಾಡಲಾಗುತ್ತದೆ, ಇದಕ್ಕೆ ಅನ್ವಯಿಸುವ ಎಲ್ಲಾ ತೆರಿಗೆಗಳು ಮತ್ತು ಇಎಮ್ಐ (ಕೇವಲ ಇಎಮ್ಐ ಆಧಾರಿತ ಪ್ರಾಡಕ್ಟ್‌ಗಳ ಸಂದರ್ಭದಲ್ಲಿ) ಸೇರಿಸಲಾಗುತ್ತದೆ. ಸಂದಾಯ ಮಾಡದೇ ಉಳಿದಿರಬಹುದಾದ ಹಿಂದಿನ ಸ್ಟೇಟ್‌ಮೆಂಟ್‌ನ ಮಿನಿಮಮ್ ಅಮೌಂಟ್ ಡ್ಯೂ ಅನ್ನು ಕೂಡ ಕಾರ್ಡ್‌ಮೆಂಬರ್‌ರ ಸದ್ಯದ ಮಿನಿಮಮ್ ಅಮೌಂಟ್ ಡ್ಯೂಗೆ ಸೇರಿಸಲಾಗುತ್ತದೆ ಮತ್ತು ಕಾರ್ಡ್‌ಮೆಂಬರ್‌ರ ಕ್ರೆಡಿಟ್ ಲಿಮಿಟ್‌ಗೆ ಮೀರಿದ ಬಾಕಿಯನ್ನೂ ಇದಕ್ಕೆ ಜೋಡಿಸಲಾಗುತ್ತದೆ.
- ಕ್ರೆಡಿಟ್ ಕಾರ್ಡ್‌ನ ಬಾಕಿಯ ಬಾಬ್ತು ಸಂದಾಯ ಮಾಡಲಾದ ಪೇಮೆಂಟ್‌ಗಳ ಸ್ವೀಕೃತಿಯನ್ನು ಮುಂದಿನ ಕಾರ್ಡ್ ಸ್ಟೇಟ್‌ಮೆಂಟ್‌ಗಳಲ್ಲಿ ನಮೂದಿಸಲಾಗುತ್ತದೆ.
- ಕಾರ್ಡ್‌ಮೆಂಬರ್‌ರ ಕಾರ್ಡ್‌ನ ಬಾಕಿಯ ಬಾಬ್ತು ಪಡೆಯಲಾದ ಪೇಮೆಂಟನ್ನು ಕ್ರಮಾನುಗತವಾಗಿ ಸರ್ವಿಸ್ ಟ್ಯಾಕ್ಸ್, ಬಡ್ಡಿಯ ಚಾರ್ಜ್‌ಗಳು, ಸರ್ವಿಸ್ ಚಾರ್ಜ್‌ಗಳು ಮತ್ತು ಫೀಸ್ (ಮೆಂಬರ್‌ಶಿಪ್ ಫೀ ಸೇರಿ), ಕೊನೇಯ ಸೈಕಲ್‌ನಿಂದ ಮೂಲಧನ ಬಾಕಿ ಹಾಗೂ ಸದ್ಯದ ಸೈಕಲ್‌ನ ಖರೀದಿಗಳು, ಈ ರೀತಿಯಲ್ಲಿ ಸರಿಹೊಂದಿಸಿಕೊಳ್ಳಲಾಗುತ್ತದೆ.
- ಕಾರ್ಡ್ ಅಕೌಂಟಿಗೆ ಹಣದ ಸಂದಾಯವನ್ನು ಈ ಕೆಳಗಿನ ಯಾವುದೇ ವಿಧಾನದಲ್ಲಿ ಮಾಡಬಹುದು.

⇨ ಕಾರ್ಡ್‌ಮೆಂಬರ್ ಯಸ್ ಬ್ಯಾಂಕ್ ಅಕೌಂಟ್ ಹೊಂದಿದ್ದಲ್ಲಿ, ಆತ/ಆಕೆ ಹಣ ಸಂದಾಯವನ್ನು ನೆಟ್ ಬ್ಯಾಂಕಿಂಗ್ ಮೂಲಕ ಮತ್ತು/ಅಥವಾ ಯಸ್ ಬ್ಯಾಂಕ್ ಎಟಿಎಮ್‌ಗಳ ಮೂಲಕ ಮಾಡಬಹುದು. ಅಂಥ ಕಾರ್ಡ್‌ಮೆಂಬರ್‌ಗಳು ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ ಸೌಲಭ್ಯವನ್ನೂ ಬಯಸಬಹುದು. ಆದರಿಂದ ಕಾರ್ಡ್‌ಮೆಂಬರ್‌ರ ಯಸ್ ಬ್ಯಾಂಕ್ ಅಕೌಂಟ್‌ನಿಂದ ಕಾರ್ಡ್ ಮೆಂಬರ್‌ರ ಕಾರ್ಡ್ ಅಕೌಂಟಿಗೆ ಡ್ಯೂ ಡೇಟಿನಂದ ಹಣವನ್ನು ಆಟೋಮ್ಯಾಟಿಕಲೀ ಟ್ರಾನ್ಸ್‌ಫರ್ ಮಾಡಲಾಗುತ್ತದೆ.

⇨ ಬೇರೆ ಬ್ಯಾಂಕ್‌ನಿಂದ ಕಾರ್ಡ್‌ಮೆಂಬರ್ ಘಉಊಖ ಫಂಡ್ ಟ್ರಾನ್ಸ್‌ಫರ್ ಪದ್ಧತಿಯಲ್ಲಿ ಹಣ ಸಂದಾಯ ಮಾಡಬಹುದು **(IFSC code YESB0CMSNOC ಬಳಸಿರಿ)**, ಅಥವಾ ಬೇರೆ ಬ್ಯಾಂಕ್‌ನ ನೆಟ್‌ಬ್ಯಾಂಕಿಂಗ್ ಅಕೌಂಟ್ ಬಳಸಿ ಬಿಲ್ ಡೆಸ್ಕ್ ಸೌಲಭ್ಯದ ಮೂಲಕ ಹಣ ಸಂದಾಯ ಮಾಡಬಹುದು.

⇨ ಪೇಮೆಂಟ್ ಇನ್‌ಸ್ಟ್ರುಮೆಂಟನ್ನು (ಚೆಕ್ ಅಥವಾ ಡ್ರಾಫ್ಟ್)ಯಸ್ ಬ್ಯಾಂಕ್ ಬ್ರಾಂಚ್‌ಗಳು ಮತ್ತು ಎಟಿಎಮ್‌ಗಳಲ್ಲಿ ಇರಿಸಲಾದ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಡ್ರಾಪ್ ಬಾಕ್ಸ್‌ನಲ್ಲಿ ಹಾಕಬಹುದು. ಅಂಥ ಚೆಕ್/ಡ್ರಾಫ್ಟ್ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ನಂಬರ್ XXXX XXXX XXXX XXXXಗೆ ಸಂದಾಯವಾಗುವಂತೆ ಬರೆದಿರಬೇಕು.

⇨ ಯಸ್ ಬ್ಯಾಂಕ್ ಬ್ರಾಂಚ್‌ಗಳಲ್ಲಿ ಕಾರ್ಡ್‌ಮೆಂಬರ್ ನಗದು ನೀಡಿಯೂ ಹಣ ಸಂದಾಯ ಮಾಡಬಹುದು. ಕ್ರೆಡಿಟ್ ಕಾರ್ಡ್ ಅಕೌಂಟಿಗೆ ನಗದು ಹಣ ಸಂದಾಯಕ್ಕಾಗಿ ಅನ್ವಯಿಸುವ ಚಾರ್ಜ್‌ಗಳಿಗಾಗಿ ದಯವಿಟ್ಟು ಚಾರ್ಜ್‌ಗಳ ಶೆಡ್ಯೂಲನ್ನು ನೋಡಿರಿ.

⇨ ಕಾರ್ಡ್‌ಮೆಂಬರ್‌ರ ಸಂಪರ್ಕದ ವಿಳಾಸ/ಈಮೇಲ್ ವಿಳಾಸದಲ್ಲಿ ಏನಾದರೂ ಬದಲಾವಣೆಯಾಗಿದ್ದಲ್ಲಿ, ಕಾರ್ಡ್‌ಮೆಂಬರ್ ನಿಯಮಿತವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಕ್ರೆಡಿಟ್ ಕಾರ್ಡ್ ಸ್ಟೇಟ್‌ಮೆಂಟ್ ಪಡೆಯುವುದನ್ನು ಖಚಿತ ಪಡಿಸಲು, ಕಾರ್ಡ್‌ಮೆಂಬರ್ ತಕ್ಷಣವೇ ಯಸ್ ಬ್ಯಾಂಕ್‌ನಲ್ಲಿ ಮಾಹಿತಿಯ ಅಪ್‌ಡೇಟ್ ಒದಗಿಸಬೇಕೆಂದು ಸಲಹೆ ನೀಡಲಾಗುತ್ತದೆ.

- ಸ್ಟೇಟ್‌ಮೆಂಟ್/ಬಿಲ್ಲಿಂಗ್ ವಿವಾದಗಳು: ಸ್ಟೇಟ್‌ಮೆಂಟ್‌ನ ತಾರೀಖಿನಿಂದ 60 ದಿನಗಳ ಒಳಗೆ ಕಾರ್ಡ್‌ಮೆಂಬರ್ ಲಿಖಿತವಾಗಿ ನ್ಯೂನತೆಯ ಮಾಹಿತಿ ನೀಡದೇ ಇದ್ದರೆ ಸ್ಟೇಟ್‌ಮೆಂಟ್‌ನಲ್ಲಿ ನೀಡಿರುವ ಎಲ್ಲಾ ಮಾಹಿತಿಯು ಸರಿಯಾಗಿವೆ ಮತ್ತು ಸ್ವೀಕೃತವಾಗಿವೆ ಎಂದು ಪರಿಗಣಿಸಲಾಗುತ್ತದೆ. ಒಂದು ಪಕ್ಷ ಮಾಹಿತಿ ದೊರಕಿದಲ್ಲಿ ಅದರ ವಿಚಾರಣೆ ಪೂರ್ತಿಗೊಳ್ಳುವ ವರೆಗೆ ಯಸ್ ಬ್ಯಾಂಕ್ ತಾತ್ಕಾಲಿಕವಾಗಿ ಚಾರ್ಜನ್ನು ಹಿಂತೆಗೆಯಬಹುದು. ಆ ನಂತರ ನಡೆಯುವ ವಿಚಾರಣೆಯಿಂದ ಅಂಥ ಚಾರ್ಜ್‌ಗಳ ದಾಯಿತ್ವ ಕಾರ್ಡ್‌ಮೆಂಬರ್‌ರ ಅಕೌಂಟಿನದ್ದೇ ಎಂದಾದರೆ, ಮುಂದಿನ ಸ್ಟೇಟ್‌ಮೆಂಟ್‌ನಲ್ಲಿ ಆ ಚಾರ್ಜ್‌ಗಳನ್ನು ಮರಳಿ ಹಾಕಲಾಗುತ್ತದೆ ಮತ್ತು ಸಂಗಡ ಸಂಬಂಧಪಟ್ಟ ರಿಟ್ರೀವಲ್ ರಿಕ್ವೆಸ್ಟ್ ಚಾರ್ಜ್‌ಗಳನ್ನೂ ಸೇರಿಸಲಾಗುತ್ತದೆ.
- ಕೇವಲ ಕನಿಷ್ಠ ಹಣ ಸಂದಾಯವನ್ನಷ್ಟೇ ಪ್ರತಿ ತಿಂಗಳೂ ಮಾಡುತ್ತಿದ್ದರೆ, ಬಾಕಿ ಹಣದ ಮೇಲಿನ ಬಡ್ಡಿ ಸಂದಾಯಮಾಡಬೇಕಾಗುವ ಕಾರಣ ಹಣ ಮರಳಿಸುವಿಕೆಯು ಹಲವಾರು ವರ್ಷಗಳ ವರೆಗೆ ಸಾಗಬಹುದು.
- ಬಿಲ್ಲಿಂಗ್ ಮತ್ತು ಸ್ಟೇಟ್‌ಮೆಂಟ್ ಬಗ್ಗೆ ವಿವಾದಗಳೇನಾದರೂ ಇದ್ದರೆ, ಅದರ ಬಗ್ಗೆ ವಿಚಾರಿಸಲು ಕಾರ್ಡ್‌ಮೆಂಬರ್ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ಸ್‌ನ್ನು ಸಂಪರ್ಕಿಸಬಹುದು.

⇨ 24x7 ಯಸ್ ಟಚ್ ಕಸ್ಟಮರ್ ಕೇರ್ ನಂಬರ್ : 1800 103 6000/022-49350000

⇨ ಅಂಚೆ ಮೂಲಕ – ಯಸ್ ಬ್ಯಾಂಕ್ ಲಿಮಿಟೆಡ್, ವನ್ ಬುಲ್ಸ್ ಪಾರ್ಕ್, ನಂ. 14, 3ನೇ ಮೇನ್ ರೋಡ್, ಅಂಬತ್ತೂರ್ ಇಂಡಸ್ಟ್ರಿಯಲ್ ಎಸ್ಟೇಟ್, ಅಂಬತ್ತೂರ್, ಚೆನ್ನೈ – 600058

⇨ ಈಮೇಲ್ ಮೂಲಕ – yesfirstcc@yesbank.in

## 5. ಕರ್ತವ್ಯಲೋಪ ಮತ್ತು ಪರಿಸ್ಥಿತಿಗಳು

ಹಣ ಸಂದಾಯದ ಅಂತಿಮ ತಾರೀಖಿನ ಒಳಗೆ ಕಾರ್ಡ್‌ಮೆಂಬರ್ ಕನಿಷ್ಠ ಸಂದಾಯದ ಮೊಬಲಗನ್ನೂ ಸಂದಾಯ ಮಾಡದೇ ಇದ್ದರೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಅಧಿಕೃತ ಕ್ರೆಡಿಟ್ ಬ್ಯೂರೋಗೆ ಮಾಸಿಕ ವರದಿಗಳಲ್ಲಿ ಆ ಅಕೌಂಟ್ 'ಓವರ್‌ಡ್ಯೂ' ಎಂದು ವರದಿ ಮಾಡಲಾಗುತ್ತದೆ. ಕನಿಷ್ಠ ಸಂದಾಯದ ಮೊಬಲಗನ್ನೂ ಸಂದಾಯ ಮಾಡದೇ ಇದ್ದರೆ, ಕ್ರೆಡಿಟ್ ಕಾರ್ಡ್ ಸೇವೆಯಲ್ಲಿ ತೊಡಕು ಉಂಟಾಗಬಹುದು. ಮುಂದಿನ ಸ್ಟೇಟ್‌ಮೆಂಟ್‌ಗಳಲ್ಲಿ ಆತನ/ ಆಕೆಯ ಬಾಕಿಯನ್ನು ಸಂದಾಯ ಮಾಡಲು ಕಾರ್ಡ್‌ಮೆಂಬರ್‌ಗೆ ನೆನಪು ಮಾಡಿಕೊಡಲಾಗುತ್ತದೆ. ಅಗತ್ಯವಿರುವ ಪೇಮೆಂಟನ್ನು ಕಾರ್ಡ್‌ಮೆಂಬರ್ ಮಾಡಿದರೆ ಆತನ/ಆಕೆಯ ದಾಖಲೆಯನ್ನು ಅಪಡೇಟ್ ಮಾಡಿ ಕ್ರೆಡಿಟ್ ಬ್ಯೂರೊಗೆ ಕಳಿಸಲಾಗುವ ಮುಂದಿನ ವರದಿಯಲ್ಲಿ 'ಕರೆಂಟ್' ಎಂದು ಸೂಚಿಸಲಾಗುತ್ತದೆ.

ಕರ್ತವ್ಯಲೋಪದ ಸ್ಥಿತಿಯಲ್ಲಿ ಸಮಯ-ಸಮಯಕ್ಕೆ ಕಾರ್ಡ್‌ಮೆಂಬರ್‌ಗೆ ನೋಟೀಸನ್ನು ಕಳಿಸಿ ಕಾರ್ಡ್ ಅಕೌಂಟ್‌ನಲ್ಲಿ ಬಾಕಿ ಇರುವುದನ್ನು ತೀರ್ಮಾನ ಮಾಡಬೇಕೆಂದು ಯೋಗ್ಯ ಸಂಪರ್ಕ ಸಾಧನಗಳ ಮೂಲಕ ತಿಳಿಸಲಾಗುತ್ತದೆ ಮತ್ತು/ಅಥವಾ ತೃತೀಯ ವ್ಯಕ್ತಿಗಳನ್ನು ನಿಯುಕ್ತಿಪಡಿಸಿ ನೆನಪು ಮಾಡಿಕೊಡಲು, ಫಾಲೋ ಅಪ್ ಮಾಡಲು ಮತ್ತು ಬಾಕಿಯನ್ನು ಸಂಗ್ರಹಿಸಲು ಆದೇಶ ನೀಡಲಾಗುತ್ತದೆ. ಈ ರೀತಿಯಲ್ಲಿ ನಿಯುಕ್ತಿಗೊಂಡ ಯಾವುದೇ ತೃತೀಯ ವ್ಯಕ್ತಿಯು ಸಾಲ ವಸೂಲಿಯ ಆಚಾರ ಸಂಹಿತೆಯನ್ನು ಪೂರ್ತಿಯಾಗಿ ಪಾಲಿಸುತ್ತಾರೆ.

## 6. ಧಾರಣಾಧಿಕಾರದ ಹಕ್ಕು

ಕಾರ್ಡ್ ಅಕೌಂಟ್‌ನಲ್ಲಿ ಸಂದಾಯ ಮಾಡಲು ಬಾಕಿ ಇರುವ ಮೊಲಗನ್ನು ನಿಗದಿತ ಕಾಲಾವಧಿಯೊಳಗೆ ಸಂದಾಯ ಮಾಡಬೇಕೆಂದು ಯಸ್ ಬ್ಯಾಂಕ್ ಆಗ್ರಹಪಡಿಸಿದರೆ, ಯಾವುದೇ ಸಮಯದಲ್ಲಿ ಯಾವ ನೋಟೀಸನ್ನೂ ನೀಡದೆ ಯಸ್ ಬ್ಯಾಂಕ್ ಕಾರ್ಡ್‌ಮೆಂಬರ್‌ರ ಯಾವುದೇ ಅಕೌಂಟ್/ಕಸ್ಟಡಿಯಲ್ಲಿ ಕ್ರೆಡಿಟ್ ಆಗಿ ಇರುವಂಥ, ಕಾರ್ಡ್‌ಮೆಂಬರ್ ಮತ್ತು/ಅಥವಾ ಆ್ಯಡ್-ಆನ್ ಕಾರ್ಡ್ ಮೆಂಬರ್‌ರ ಹಣದ ಧಾರಣಾಧಿಕಾರದ ಮತ್ತು ಬೇರ್ಪಡಿಸಿಕೊಳ್ಳುವ ಅಧಿಕಾರ ಯಸ್ ಬ್ಯಾಂಕ್ ಹೊಂದಿರುತ್ತದೆ.

## 7. ಕಾರ್ಡ್‌ಮೆಂಬರ್‌ಶಿಪ್‌ನ ಮುಕ್ತಾಯಗೊಳಿಸುವಿಕೆ/ರದ್ದುಗೊಳಿಸುವಿಕೆ

- ಕಾರ್ಡ್‌ಮೆಂಬರ್ ಯಾವುದೇ ಸಮಯದಲ್ಲಿ ಯಸ್ ಬ್ಯಾಂಕ್‌ನ ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆದು ತಮ್ಮ ಕಾರ್ಡ್‌ಮೆಂಬರ್‌ಶಿಪ್‌ನ್ನು ಮುಕ್ತಾಯಗೊಳಿಸಬಹುದು:
- **ಯಸ್ ಬ್ಯಾಂಕ್ ಲಿಮಿಟುಡ್, ವನ್ ಇಂಡಿಯಾ ಬುಲ್ಸ್ ಪಾರ್ಕ್, ನಂ. 14, 3ನೇ ಮೇನ್ ರೋಡ್, ಅಂಬತ್ತೂರ್ ಇಂಡಸ್ಟ್ರಿಯಲ್ ಎಸ್ಟೇಟ್, ಅಂಬತ್ತೂರ್, ಚೆನ್ನೈ- 600058.** ಸಂಗಡ ಕಾರ್ಡನ್ನು ಮೂಲೆಯಿಂದ ಮೂಲೆಗೆ ಕತ್ತರಿಸಿ 4 ತುಂಡುಗಳಾಗಿ ಮಾಡಿ ಕಳಿಸಬೇಕು. ಇಂಥ ಲಿಖಿತ ಕೋರಿಕೆಯ ಮೇರೆಗೆ ಆ್ಯಡ್-ಆನ್ ಕಾರ್ಡ್‌ಗಳನ್ನೂ ಸೇರಿಕೊಂಡಂತೆ ಎಲ್ಲಾ ಕಾರ್ಡ್‌ಗಳನ್ನು ಮುಕ್ತಾಯಗೊಳಿಸಲಾಗುತ್ತದೆ. ತುಂಡು ಮಾಡಲಾಗಿರುವ ಕಾರ್ಡ್‌ಗಳು ತಲುಪಿದ್ದು ಕಾರ್ಡ್ ಅಕೌಂಟ್‌ನಲ್ಲಿ ಬಾಕಿ ಇರುವ ಎಲ್ಲಾ ಹಣವನ್ನು ಸಂದಾಯ ಮಾಡಿದಾಗಲೇ ಮುಕ್ತಾಯಗೊಳಿಸುವಿಕೆ ಪರಿಣಾಮಕಾರಿಯಾಗುತ್ತದೆ. ಯಾವುದೇ ಆ್ಯನ್ಯುವಲ್ ಫೀ, ಜೋಯ್ನಿಂಗ್ ಅಥವಾ ರಿನ್ಯೂವಲ್ ಫೀಯನ್ನು ಪ್ರೋ-ರಾಟಾ ಆಧಾರದಲ್ಲಿ ಮರಳಿಸಲಾಗುವುದಿಲ್ಲ.
- ಕ್ರೆಡಿಟ್ ಕಾರ್ಡ್‌ನ ಬಳಕೆಯಲ್ಲಿ ಅಸಾಮಾನ್ಯವಾದ ಮತ್ತು ಅಸ್ವಾಭಾವಿಕ ಮಾದರಿಗಳು ಕಂಡುಬಂದರೆ, ಅಂಥ ಕಾರ್ಡ್ ಟ್ರಾನ್ಸ್ಯಾಕ್ಷನ್‌ಗಳ ಅರ್ಹತೆಯನ್ನು ದೃಢೀಕರಿಸಲು ಯಸ್ ಬ್ಯಾಂಕ್ ತಮ್ಮ ದಾಖಲೆಯಲ್ಲಿರುವ ಕಾರ್ಡ್‌ಮೆಂಬರ್‌ನ ಅಧಿಕೃತ ಫೋನ್ ನಂಬರ್‌ನಲ್ಲಿ ಕಾರ್ಡ್‌ಮೆಂಬರ್‌ನ್ನು ಸಂಪರ್ಕಿಸಲು ಪ್ರಯತ್ನಿಸುತ್ತದೆ.
- ಒಂದು ಪಕ್ಷ ಯಸ್ ಬ್ಯಾಂಕ್ ಈ ರೀತಿ ಕಾರ್ಡ್‌ಮೆಂಬರನ್ನು ಸಂಪರ್ಕಿಸಲು ಪ್ರಯತ್ನಿಸಿ ವಿಫಲವಾದರೆ, ಕಾರ್ಡ್‌ಮೆಂಬರ್‌ರ ಹಿತಾಸಕ್ತಿಯಲ್ಲಿ ಮತ್ತು/ಅಥವಾ ಸುರಕ್ಷಾ ಕಾರಣಗಳಿಗಾಗಿ ಅಗತ್ಯವೆಂದು ಯಸ್ ಬ್ಯಾಂಕ್ ಯಥೋಚಿತವಾಗಿ ಮನಗೊಂಡರೆ, ಮುಂದೆ ಯಾವುದೇ ನೋಟೀಸನ್ನು ನೀಡದೆ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನ ಬಳಕೆಯನ್ನು ನಿರ್ಬಂಧಿಸಬಹುದು/ಮುಕ್ತಾಯಗೊಳಿಸಬಹುದು.
- ಕಾರ್ಡ್‌ಮೆಂಬರ್ ಸಲ್ಲಿಸಬೇಕಾದ ಹಣ ಸಂದಾಯ ಮಾಡುವಲ್ಲಿ ಕರ್ತವ್ಯಲೋಪ ಮಾಡಿದರೆ ಅಥವಾ ನೀಡಲಾಗಿರುವ ಕ್ರೆಡಿಟ್ ಲಿಮಿಟ್‌ನ್ನು ಮೀರಿದರೆ, ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಲ್ಲಿನ ಸೌಲಭ್ಯಗಳನ್ನು ಸ್ಥಗಿತಗೊಳಿಸಬಹುದು. ಕಾರ್ಡ್‌ಮೆಂಬರ್ ಅಗ್ರೀಮೆಂಟ್ ಮುಕ್ತಾಯಗೊಂಡ ನಂತರ ಅಥವಾ ಕಾಡ್ ಅಕೌಂಟ್ ಸ್ಥಗಿತಗೊಳಿಸಲಾಗಿದ್ದಲ್ಲಿ ಕ್ರೆಡಿಟ್ ಕಾರ್ಡನ್ನು ಬಳಸಬಾರದು. ಅಂಥ ಪರಿಸ್ಥಿತಿಯಲ್ಲಿ ಕಾರ್ಡ್‌ಮೆಂಬರ್ (ಕಾನೂನಿನ ಅನುಸಾರ ಬೇಕಾಗಬಹುದಾದ ಯಾವುದೇ ಕರ್ತವ್ಯಲೋಪ ಅಥವಾ ಬೇರೆ ಯಾವುದಾದರೂ ನೋಟೀಸನ್ನು ಅನ್ವಯಿಸಿ) ತಕ್ಷಣವೇ ಕ್ರೆಡಿಟ್ ಕಾರ್ಡ್ ಅಕೌಂಟ್‌ನ ಒಟ್ಟು ಬಾಕಿಯನ್ನೆಲ್ಲಾ ಯಸ್ ಬ್ಯಾಂಕ್‌ಗೆ ಸಂದಾಯ ಮಾಡಬೇಕಾಗುತ್ತದೆ. ಈ ಮೊತ್ತದಲ್ಲಿ ಕ್ರೆಡಿಟ್ ಕಾರ್ಡ್ ಅಕೌಂಟಿಗೆ ಇನ್ನೂ ಚಾರ್ಜ್ ಮಾಡಿಲ್ಲದ ಎಲ್ಲಾ ವ್ಯವಹಾರದ ಹಾಗೂ ಇತರ ಮೊಬಲಗುಗಳನ್ನು ಸೇರಿಕೊಂಡು, ಕಾರ್ಡ್‌ಮೆಂಬರ್ ಅಗ್ರೀಮೆಂಟ್ ಅನುಸಾರ ಯಸ್ ಬ್ಯಾಂಕ್‌ಗೆ ಬರಬೇಕಾದ ಎಲ್ಲಾ ಮೊಬಲಗು ಸೇರಿದೆ. ಅಂಥ ಎಲ್ಲಾ ಬಾಕಿ ಇರುವ ಮೊಬಲಗನ್ನು ಪೂರ್ತಿಯಾಗಿ ಸಂದಾಯ ಮಾಡುವ ವರೆಗೆ ಕ್ರೆಡಿಟ್ ಕಾರ್ಡ್ ಮುಕ್ತಾಯಗೊಳಿಸಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ.
- ಕಾರ್ಡ್‌ಮೆಂಬರ್‌ರ ಮೃತ್ಯು ಅಥವಾ ಅನರ್ಹತೆಯ ಸಂದರ್ಭದಲ್ಲಿ ಆ್ಯಡ್-ಆನ್ ಕಾರ್ಡ್ ಸಹಿತವಾಗಿ ಕಾರ್ಡ್‌ಮೆಂಬರ್‌ಗೆ ನೀಡಲಾಗಿರುವ ಕ್ರೆಡಿಟ್ ಗಾರ್ಡ್ ತಾನಾಗಿಯೇ ರದ್ದಾಗುತ್ತದೆ. ಕ್ರೆಡಿಟ್ ಕಾರ್ಡ್ ಅಕೌಂಟ್ ಯಾವುದೇ ಸರಕಾರಿ/ನಿಯಂತ್ರಕ ಪ್ರಾಧಿಕಾರದ ನಿರ್ದೇಶಾನುಸಾರ ಕೂಡ ಸ್ಥಗಿತಗೊಳ್ಳಬಹುದು. ಮೃತ್ಯು ಅಥವಾ ಅನರ್ಹತೆ, ಆದೇನಿದ್ದರೂ ಕ್ರಡಿಟ್ ಕಾರ್ಡ್ ಅಕೌಂಟ್‌ನಲ್ಲಿ ಸಂದಾಯ ಮಾಡಲು ಬಾಕಿ ಇರುವ ಎಲ್ಲಾ ಮೊಬಲಗು ತಕ್ಷಣವೇ ಸಂದಾಯ ಮಾಡಬೇಕಾದುದು ಅನಿವಾರ್ಯವಾಗುತ್ತದೆ ಮತ್ತು ಯಸ್ ಬ್ಯಾಂಕ್ ಅಂಥ ಮೊಬಲಗಿನ ವಸೂಲಿಗಾಗಿ ಸಂಬಧಪಟ್ಟ ಕಾನೂನಿನ ಅನುಸಾರ ಕಾರ್ಡ್‌ಮೆಂಬರ್ ಬಗ್ಗೆ ಯಾವ ಪಕ್ಷಪಾತವನ್ನೂ ಮಾಡದೇ ಎಲ್ಲಾ ಬಾಕಿ ಹಣವನ್ನು ಪಡೆಯಲು ಕ್ರಮ ಕೈಗೊಳ್ಳಬಹುದಾಗಿದೆ.

## 8. ಕಾರ್ಡ್ ಕಳೆದು ಹೋಗುವುದು/ಕಳುವು/ತಪ್ಪು ಬಳಕೆ

- ತಮ್ಮ ಪ್ರೈಮರಿ ಅಥವಾ ಯಾವುದೇ ಅತಿರಿಕ್ತ ಕ್ರೆಡಿಟ್ ಕಾರ್ಡ್ ಕೈತಪ್ಪಿ ಇರಿಸಿದ್ದರೆ, ಕಳೆದು ಹೋದರೆ, ಕಳುವಾದರೆ, ಮುರಿದು ಹೋದರೆ, ಬರಬೇಕಾದ ಸಮಯದಲ್ಲಿ ದೊರಕದೇ ಹೋದರೆ ಅಥವಾ ಆತ/ಆಕೆ ಕ್ರೆಡಿಟ್ ಕಾರ್ಡನ್ನು ಕಾರ್ಡ್‌ಮೆಂಬರ್‌ರ ಅನುಮತಿಯ ವಿನಹ ಬಳಸಲಾಗುತ್ತಿದೆ ಎಂದು ಅನುಮಾನಬಂದರೆ ಕಾರ್ಡ್‌ಮೆಂಬರ್ ತಕ್ಷಣವೇ ವಿಷಯವನ್ನು ನಮ್ಮ 24x7 ಯಸ್ ಟಚ್ ಕಸ್ಟಮರ್ ಕೇರ್ ನಂಬರಿಗೆ ಸೂಚಿತಗೊಳಿಸಬೇಕು.
- ಅನಧಿಕೃತ ಇಲೆಕ್ಟ್ರಾನಿಕ್ ವ್ಯವಹಾರ ತಕ್ಷಣ ಆದಷ್ಟು ಬೇಗನೇ ಕಾರ್ಡ್ ಮೆಂಬರ್ ಅಂಥ ಘಟನೆಯನ್ನು ಬ್ಯಾಂಕಿಗೆ ತಿಳಿಸಬೇಕು. ಈ ಬ್ಯಾಂಕಿಗೆ ತಿಳಿಸಲು ಎಷ್ಟು ವಿಳಂಬವಾಗುವುದೋ ಬ್ಯಾಂಕಿಗೆ/ಕಾರ್ಡ್ ಮೆಂಬರ್‌ಗೆ ನಷ್ಟ ಸಾಧ್ಯತೆಯ ಅಪಾಯ ಅಷ್ಟೇ ಹೆಚ್ಚಾಗುತ್ತದೆ.
- ಅ. ಗ್ರಾಹಕರ ಸೀಮಿತ ದಾಯಿತ್ವ
- ಈ ಕೆಳಗಿನ ಸಂದರ್ಭಗಳಲ್ಲಿ ಅನಧಿಕೃತ ವ್ಯವಹಾರಗಳಿಂದಾಗುವ ನಷ್ಟಗಳಿಗೆ ಗ್ರಾಹಕರು ಜವಾಬ್ದಾರರಾಗುತ್ತಾರೆ :
- ನಷ್ಟವಾಗಿರುವುದು ಗ್ರಾಹಕರ ಅಲಕ್ಷ್ಯದ ಕಾರಣದಿಂದಾದಾಗ, ಉದಾಹರಣೆಗೆ ಅವರು ಪೇಮೆಂಟ್ ರುಜುವಾತುಗಳನ್ನು ಹಂಚಿಕೊಂಡಿರುವುದು. ಅನಧಿಕೃತ ವ್ಯವಹಾರವನ್ನು ಅವರು ಬ್ಯಾಂಕಿಗೆ ತಿಳಿಸುವ ಮೊದಲೇ ಆಗಿರುವ ಸಂಪೂರ್ಣ ನಷ್ಟವನ್ನು ಗ್ರಾಹಕರೇ ವಹಿಸಿಕೊಳ್ಳಬೇಕಾಗುತ್ತದೆ.

- ಅನಧಿಕೃತ ಇಲೆಕ್ಟ್ರಾನಿಕ್ ಬ್ಯಾಂಕಿಂಗ್ ವ್ಯವಹಾರಕ್ಕೆ ಗ್ರಾಹಕರಾಗಲೀ ಬ್ಯಾಂಕ್ ಆಗಲಿ ಜವಾಬ್ದಾರಿಯಾಗದೇ, ಕಾರಣವೆ ಬೇರೆಲ್ಲೊ ಸಿಸ್ಟಮ್‌ನಲ್ಲಿ ಆಗಿದ್ದರೆ ಮತ್ತು ಅಂಥ ವ್ಯವಹಾರವನ್ನು ಬ್ಯಾಂಕಿಗೆ ತಿಳಿಸಲು ಗ್ರಾಹಕರಿಂದ ವಿಳಂಬವಾದಲ್ಲಿ (ಬ್ಯಾಂಕ್‌ನಿಂದ ಸೂಚನೆ ಪಡೆದ ನಾಲ್ಕರಿಂದ ಏಳು ದಿನಗಳ ನಂತರ), ಗ್ರಾಹಕರ ಪ್ರತಿ ವ್ಯವಹಾರದ ದಾಯಿತ್ವವು ವ್ಯವಹಾರದ ಮೌಲ್ಯ ಅಥವಾ ಟೇಬಲ್ 1ರಲ್ಲಿ ಸೂಚಿಸಲಾಗಿರುವ ಮೊಬಲಗು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟಕ್ಕೇ ಸೀಮಿತವಾಗಿರುತ್ತದೆ.

**ಟೇಬಲ್ 1**

| **ಅಕೌಂಟ್ ಮಾದರಿ** | ಗರಿಷ್ಠ ದಾಯಿತ್ವ (₹) |
|---|---|
| 5 ಲಕ್ಷದ ವರೆಗಿನ ಲಿಮಿಟ್‌ನ ಕ್ರೆಡಿಟ್ ಕಾರ್ಡ್ | ₹10,000 |
| 5 ಲಕ್ಷಕ್ಕಿಂತ ಹೆಚ್ಚಿನ ಲಿಮಿಟ್‌ನ ಕ್ರೆಡಿಟ್ ಕಾರ್ಡ್ | ₹25,000 |

ತೃತೀಯ ವ್ಯಕ್ತಿಯಿಂದಾದ ಉಲ್ಲಂಘನೆಗಾಗಿ, ಅಂದರೆ ಕಾರಣ ಕರ್ತರು ಬ್ಯಾಂಕ್ ಅಥವಾ ಗ್ರಾಹಕರಲ್ಲೇ ಬೇರೆಲ್ಲೊ ಸಿಸ್ಟಮ್‌ನಲ್ಲಿ ಘಟಿಸಿದ ನ್ಯೂನತೆ ಎಂದಾದರೆ ಗ್ರಾಹಕರ ಒಟ್ಟು ದಾಯಿತ್ವವನ್ನು ಟೇಬಲ್ 2ರಲ್ಲಿ ಸಾರಾಂಶದಲ್ಲಿ ನೀಡಲಾಗಿದೆ :

**ಟೇಬಲ್ 2**

**ಗ್ರಾಹಕ ದಾಯಿತ್ವದ ಸಾರಾಂಶ**

| **ಮೋಸದ ವ್ಯವಹಾರವನ್ನು ವರದಿ ಮಾಡಲು ಸಂದೇಶ ದೊರಕಿದ ತಾರೀಖಿನಿಂದ ತಗಲಿದ ಸಮಯ** | **ಗರಿಷ್ಠ ದಾಯಿತ್ವ (₹)** |
|---|---|
| 3 ಕಾರ್ಯಕಾರಿ ದಿನಗಳ ಒಳಗೆ | ಶೂನ್ಯ ದಾಯಿತ್ವ |
| 4ರಿಂದ 7 ದಿನಗಳ ಒಳಗೆ | ವ್ಯವಹಾರದ ಮೌಲ್ಯ ಅಥವಾ ಟೇಬಲ್ 1ರಲ್ಲಿ ಸೂಚಿಸಲಾಗಿರುವ ಮೊಬಲಗು, ಇವುಗಳಲ್ಲಿ ಯಾವುದು ಕಡಿಮೆಯೋ ಅದು |
| 7 ದಿನಗಳಿಗೆ ಮೀರಿದಾಗ | ಪೂರ್ತಿ ವ್ಯವಹಾರದ ಮೌಲ್ಯ (ಬ್ಯಾಂಕಿನ ದಾಯಿತ್ವ ಶೂನ್ಯ) |

- ಟೇಬಲ್ 2ರಲ್ಲಿ ನೀಡಲಾಗಿರುವ ಕಾರ್ಯಕಾರಿ ದಿನಗಳ ಸಂಖ್ಯೆಯನ್ನು ಗ್ರಾಹಕರ ಹೋಮ್ ಬ್ರಾಂಚ್‌ನ ಕೆಲಸದ ವೇಳೆ ಪಟ್ಟಿಯಂತೆ ಲೆಕ್ಕ ಮಾಡಲಾಗುತ್ತದೆ ಮತ್ತು ಅದರಲ್ಲಿ ಸಂದೇಶ ದೊರಕಿದ ತಾರೀಖು ಸೇರಿರುವುದಿಲ್ಲ.
- ಕ್ರೆಡಿಟ್ ಕಾರ್ಡ್ ಕಳೆದು ಹೋದ ಅಥವಾ ಕಳುವಾದ ಸಂದರ್ಭದಲ್ಲಿ ಕಾರ್ಡ್ ಮೆಂಬರ್ ಮೇಲ್ಕಾಣಿಸಿದ ಮಾನದಂಡಗಳನ್ನು ಪೂರೈಸುತ್ತಿದ್ದಲ್ಲಿ, ಕಾರ್ಡ್ ಮೆಂಬರ್ ಅಂಥ ಕಳುವನ್ನು ಪೋಲಿಸರಲ್ಲಿ ವರದಿ ಮಾಡಿ, ಎಫ್‌ಐಆರ್ ದಾಖಲು ಮಾಡುವುದೂ ಅಗತ್ಯವಾಗಿದೆ ಮತ್ತು ಪೋಲಿಸರಿಗಿತ್ತ ದೂರಿನ ಒಂದು ಪ್ರತಿಯನ್ನು ಬ್ಯಾಂಕಿಗೆ ನೀಡಬೇಕಾಗುತ್ತದೆ.
- ಬೇರೆ ಯಾರಿಗಾದರೂ ಪಿನ್ ದೊರಕಿ ಕಾರ್ಡ್‌ನ ತಪ್ಪು ಬಳಕೆ ಮಾಡಿದಾಗ ಅಥವಾ ಕಾರ್ಡ್‌ಮೆಂಬರ್ ಅಥವಾ ಆ್ಯಡ್-ಆನ್‌ಮೆಂಬರ್‌ರ ಸಮ್ಮತಿಯಿಂದ ತಪ್ಪು ಬಳಕೆ ಮಾಡಿದಾಗ ಉಂಟಾಗಬಹುದಾದ ನಷ್ಟಕ್ಕೆ ಕಾರ್ಡ್‌ಮೆಂಬರ್‌ರೇ ಜವಾಬ್ದಾರಿಯಾಗುತ್ತಾರೆ.
- ಕಾರ್ಡ್‌ಮೆಂಬರ್ ಮೋಸದ ಕಾರ್ಯವೆಸಗಿದರೆ, ಅದರಿಂದಾಗುವ ನಷ್ಟಕ್ಕೆ ಕಾರ್ಡ್ ಮೆಂಬರ್ ಜವಾಬ್ದಾರರಾಗುತ್ತಾರೆ. ಸಾಕಷ್ಟು ಎಚ್ಚರಿಕೆ ವಹಿಸದೆ ಕಾರ್ಡ್‌ಮೆಂಬರ್ ಕಾರ್ಯವೆಸಗಿದರೆ, ಅದರಿಂದಾಗುವ ಎಲ್ಲಾ ನಷ್ಟಗಳಿಗೆ ಕಾರ್ಡ್‌ಮೆಂಬರ್ ದಾಯಿಯಾಗುತ್ತಾರೆ.
- ಕಾರ್ಡ್ ಅಥವಾ ಪಿನ್‌ನ ಕಳೆದು ಹೋಗುವಿಕೆ, ಕಳುವು ಅಥವಾ ದುರ್ವ್ಯವಹಾರದ ಬಗ್ಗೆ ಯೋಗ್ಯವೆಂದು ಪರಿಗಣಿಸಿದರೆ ಯಸ್ ಬ್ಯಾಂಕ್ ಕಾರ್ಡ್‌ಮೆಂಬರ್ ಅಥವಾ ಯಾವುದೇ ಆ್ಯಡ್-ಆನ್ ಕಾರ್ಡ್‌ಮೆಂಬರ್‌ಗೆ ಸೂಚನೆ ನೀಡದೇನೇ ಮಾಹಿತಿಯನ್ನು ಪೋಲಿಸರಿಗೆ ಅಥವಾ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಒದಗಿಸಬಹುದು.
- ಕಾರ್ಡ್ ಕಳೆದು ಹೋಗಿದೆ ಎಂದು ಒಮ್ಮೆ ವರದಿ ಮಾಡಿದ ನಂತರ ಪುನಃ ಕಾರ್ಡ್ ದೊರಕಿದರೂ ಯಾವುದೇ ಸಂದರ್ಭದಲ್ಲಿ ಕಾರ್ಡ್‌ಮೆಂಬರ್ ಅದನ್ನು ಬಳಸುವಂತಿಲ್ಲ. ಆ ಕಾರ್ಡನ್ನು ದಯವಿಟ್ಟು ಮೆಗ್ನೆಟಿಕ್ ಸ್ಟ್ರಿಪ್ ಮತ್ತು ಇಎಮ್‌ವಿ ಚಿಪ್‌ನ ಮೇಲಿಂದಲೇ ಹಲವಾರು ತುಂಡುಗಳಾಗಿ ಮಾಡಿ ತೊಲಗಿಸಿರಿ.
- ಕ್ರೆಡಿಟ್ ಕಾರ್ಡ್ ಬಳಕೆಗಾಗಿ ಕಾರ್ಡ್‌ಮೆಂಬರ್‌ಗೆ ನೀಡಲಾದ ಪಿನ್ (ಪರ್ಸನಲ್ ಐಡೆಂಟಿಫಿಕೇಶನ್ ನಂಬರ್) ಅಥವಾ ಪಿನ್‌ನ ರೂಪದಲ್ಲಿ ಕಾರ್ಡ್‌ಮೆಂಬರ್ ಆರಿಸಿಕೊಂಡಿರುವ ಬೇರೆ ಯಾವುದೇ ನಂಬರ್‌ನ್ನು ಕೇವಲ ಕಾರ್ಡ್‌ಮೆಂಬರ್‌ಗೆ ತೋರಿಸಬೇಕು. ಅದು ಕಾರ್ಡ್‌ಮೆಂಬರ್‌ರ ವೈಯಕ್ತಿಕ ಬಳಕೆಗೆ ಮಾತ್ರವೇ ಆಗಿದ್ದು ಬೇರೆಯವರಿಗೆ ಹಸ್ತಾಂತರಿಸಬಾರದು ಮತ್ತು ಅತ್ಯಂತ ಗೋಪನೀಯವಾಗಿರಬೇಕು. ಇದರ ಬಳಕೆಯು ತೃತೀಯ ವ್ಯಕ್ತಿಗೆ ಸಾಧ್ಯವಾಗುವುದನ್ನು ತಡೆಯಲು ಯಾವುದೇ ಮಾದರಿಯಲ್ಲಿ, ಸ್ಥಳದಲ್ಲಿ ಅಥವಾ ರೂಪದಲ್ಲಿ ಪಿನ್‌ನ ಲಿಖಿತ ದಾಖಲನ್ನು ಇರಿಸಬಾರದು. ಪಿನ್‌ನ್ನು ಯಾವುದೇ ತೃತೀಯ ವ್ಯಕ್ತಿಗೆ, ಅವರು ಯಸ್ ಬ್ಯಾಂಕ್‌ನ ಸಿಬ್ಬಂದಿ ಇರಲಿ ಅಥವಾ ಕಾರ್ಡ್ ವ್ಯವಹಾರ ಸ್ವೀಕರಿಸುವ ಸಂಸ್ಥೆ, ಯಾವ ಸಂದರ್ಭದಲ್ಲೂ ಅಥವಾ ಯಾವ ರೀತಿಯಲ್ಲೂ, ಸ್ವೇಚ್ಛೆಯಿಂದಾಗಲೀ ಬೇರೆ ಯಾವುದೇ ಕಾರಣಕ್ಕಾಗಲಿ, ನೀಡಲೇಬಾರದು. ಕಾರ್ಡ್‌ಮೆಂಬರ್ ತಮ್ಮ ಪಿನ್‌ನೊಂದಿಗೆ ಯಾವುದೇ ರೀತಿಯಲ್ಲಿ ದುರ್ಲಕ್ಷ್ಯ ಮಾಡಿದರೆ ಅದಕ್ಕೆ ಯಸ್ ಬ್ಯಾಂಕ್ ಮತ್ತು/ಅಥವಾ ಅವರ ಸಿಬ್ಬಂದಿ/ಕರ್ಮಚಾರಿ ಜವಾಬ್ದಾರಿ ಅಥವಾ ದಾಯಿತ್ವ ವಹಿಸಲಾರರು.

## 9. ಅಸಮಾಧಾನ ಪರಿಹಾರ

ನಮ್ಮ ಸೇವೆ ಮತ್ತು/ಅಥವಾ ಯಾವುದೇ ಯಸ್ ಬ್ಯಾಂಕ್ ಎಕ್ಸೆಸ್ ಚ್ಯಾನಲ್‌ಗಳು ನೀಡಿದ ಪ್ರತ್ಯುತ್ತರದಿಂದ ನಿಮಗೆ ತಪ್ತಿಯಾಗಿಲ್ಲವೆಂದಾದರೆ ನೀವು 1800 103 6000 (ಟೋಲ್ ಫ್ರೀ)/022-49350000ಗೆ ಕರೆ ನೀಡಬಹುದು ಅಥವಾ **yesfirstcc@yesbank.in**ಗೆ ಈಮೇಲ್ ಕಳಿಸಬಹುದು. ಏನಾದರೂ ದೂರೇರಿಸಬೇಕಾದಲ್ಲಿ ನೀವು ನಮ್ಮ ನೋಡಲ್ ಆಫೀಸರ್ ಶ್ರೀ ರತನ್ ಕುಮಾರ್ ಕೇಶ್, ಇವರನ್ನು ಯಸ್ ಬ್ಯಾಂಕ್ ಲಿಮಿಟೆಡ್, 22ನೇ ಮಹಡಿ, ಐಎಫ್‌ಸಿ, ಯಸ್ ಬ್ಯಾಂಕ್ ಟವರ್, ಎಲ್ಫಿನ್‌ಸ್ಟನ್ ರೋಡ್ (ಪ), ಮುಂಬಯಿ – 400013. principal.nodalofficer@yesbank.in ಇಲ್ಲಿ ಸಂಪರ್ಕಿಸಬಹುದು. ಅಥವಾ ಸೋಮವಾರದಿಂದ ಶುಕ್ರವಾರದ ನಡುವೆ, ಬೆಳಿಗ್ಗೆ 9.30 ರಿಂದ ಸಂಜೆ 5.30ರ ಒಳಗೆ 0124-4619044ಗೆ ಕರೆ ನೀಡಿರಿ.

ಮೇಲ್ಕಾಣಿಸಿದ ಮಾರ್ಗಗಳ ಮೂಲಕ ನೀವು ನಿಮ್ಮ ದೂರನ್ನು ಮಂಡಿಸಿದ 1 (ಒಂದು) ತಿಂಗಳ ಒಳಗೆ ನೀವು ಮರುತ್ತರ ಪಡೆಯದಿದ್ದರೆ, ಅಥವಾ ನೀವು ಪಡೆದ ಮರುತ್ತರದಿಂದ ನಿಮಗೆ ತೃಪ್ತಿಯಾಗದಿದ್ದಲ್ಲಿ, ನೀವು ಸ್ವತಂತ್ರ ಪುನರಾವಲೋಕನೆಗಾಗಿ ಬ್ಯಾಂಕಿಂಗ್ ಒಂಬುಡ್ಸ್‌ಮನ್‌ಗೆ ಬರೆಯಬಹುದು. ಬ್ಯಾಂಕಿಂಗ್ ಒಂಬುಡ್ಸ್‌ಮನ್ ಸ್ಕೀಮ್ ಬಗ್ಗೆ ವಿವರಗಳಿಗಾಗಿ www.rbi.org.inಯಲ್ಲಿ ದಯವಿಟ್ಟು ಗ್ರೀವೆನ್ಸ್ ರೀಡ್ರೆಸಲ್ ವೆಬ್‌ಪೇಜನ್ನು ಸಂದರ್ಶಿಸಿರಿ.

## 10. ಬಹಿರಂಗಪಡಿಸುವಿಕೆ ಮತ್ತು ಪ್ರಧಾನ ನಿಯಂತ್ರಕ ಮಾಹಿತಿ

- ನಿಮ್ಮ ಕ್ರೆಡಿಟ್ ಕಾರ್ಡ್‌ಗೆ(ಗಳಿಗೆ) ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಕಾರ್ಡ್‌ಮೆಂಬರ್‌ಗೆ ಯಾವುದೇ ಸೂಚನೆಯನ್ನು ನೀಡದೆ ಜ್ಯಾರಿ ಇರುವ ವ್ಯವಹಾರ ಕ್ರಮಗಳ ಅನುಸಾರ ಸಮಯ-ಸಮಯಕ್ಕೆ ಯಾವುದೇ ಕ್ರೆಡಿಟ್ ಬ್ಯೂರೋಗೆ (ಸದ್ಯದ ಹಾಗೂ ಭವಿಷ್ಯತ್ತಿನ) ಬ್ಯಾಂಕ್ ಬಹಿರಂಗಪಡಿಸಬಹುದೆಂದು ಕಾರ್ಡ್‌ಮೆಂಬರ್ ಒಪ್ಪಿಕೊಳ್ಳುತ್ತಾರೆ.
- ಕಾರ್ಡ್ ಮೆಂಬರ್‌ಗಳ ಅರ್ಹತೆ ಮತ್ತು ಬ್ಯಾಂಕ್‌ನ ನಿಷ್ಕರ್ಷೆಯ ಮೇರೆಗೆ ಕಾರ್ಡ್ ಮೆಂಬರ್ ಹೊಂದಿರುವ ಕ್ರೆಡಿಟ್ ಕಾರ್ಡ್ ಅಪ್‌ಗ್ರೇಡ್/ಡೌನ್‌ಗ್ರೇಡ್ ಮಾಡುವುದು ಸಾಧ್ಯವಿದೆ. ಕಾರ್ಡ್ ಮೆಂಬರ್‌ಗೆ ನೀಡಲಾಗಿರುವ ಕ್ರೆಡಿಟ್ ಲಿಮಿಟ್‌ನ ತಿದ್ದುಪಡಿಗಷ್ಟೆ ಸೀಮಿತವಲ್ಲದೇ ಅದರ ವಿಸ್ತಾರವೂ ಸಾಧ್ಯವಿದೆ.
- ದ ಕ್ರೆಡಿಟ್ ಇನ್‌ಫಾರ್ಮೇಶನ್ ಬ್ಯೂರೊ (CIBIL), ಭಾರತ ಸರಕಾರದ ಒಂದು  ಅನುಸಂಧಾನ ಮತ್ತು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಆರ್ಥಿಕತೆಯ ಕಾರ್ಯ ನಿರ್ವಹಣೆ ಮತ್ತು ಸ್ಥಿರತೆಯನ್ನು ಸುಧಾರಿಸಲು ಕೆಲಸಮಾಡುತ್ತವೆ. ಈ ಅನುಸಂಧಾನದಲ್ಲಿ ಸಹಭಾಗಿಯಾಗುವ ಎಲ್ಲಾ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳು ಕಸ್ಟಮರ್ ಡೆಟಾವನ್ನು ಸಿಬಿಲ್/ಇತರ ಕ್ರೆಡಿಟ್ ಬ್ಯೂರೋಗಳೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ ಮತ್ತು ಈ ಮಾಹಿತಿಯನ್ನು ಕ್ರೆಡಿಟ್ ಇನ್‌ಫಾರ್ಮೇಶನ್ ಕಂಪೆನೀಸ್ ರೆಗ್ಯುಲೇಶನ್ ಆ್ಯಕ್ಟ್ 2005 ಅಂತರ್ಗತ ಒದಗಿಸಲಾಗುತ್ತದೆ. ಇದೇ ಕಾರಣಕ್ಕಾಗಿ ಕಾರ್ಡ್‌ಮೆಂಬರ್‌ಗಳಿಗೆ ನಾವು ತಿಳಿಸುವುದೇನೆಂದರೆ, ಒಂದು ಪಕ್ಷ ಕಾರ್ಡ್ ಪೇಮೆಂಟ್ ಸಮಯ ಮೀರಿ ಬಾಕಿ ಇದ್ದರೆ, ಕಾರ್ಡ್‌ಮೆಂಬರ್‌ರಿಂದ ಕ್ರೆಡಿಟ್ ಕಾರ್ಡ್(ಗಳ) ಬಗ್ಗೆ ಆಗುವ ಕರ್ತವ್ಯಲೋಪಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು, ಯೋಗ್ಯ ನೋಟೀಸನ್ನು ನೀಡಿ ಸಿಬಿಲ್ ಹಾಗೂ ಇತರ ಕ್ರೆಡಿಟ್ ಬ್ಯೂರೋಗೆ (ಸದ್ಯದ ಹಾಗೂ ಭವಿಷ್ಯತ್ತಿನ)ಯಸ್ ಬ್ಯಾಂಕ್ ಬಹಿರಂಗಪಡಿಸುತ್ತದೆ. ಕ್ರೆಡಿಟ್ ಕಾರ್ಡ್‌ನಲ್ಲಿ ಸಮಯ ಮೀರಿ ಬಾಕಿ ಹಣವನ್ನು ಸಂದಾಯ ಮಾಡಿರುವ ಬಗ್ಗೆ ಯಾವುದೇ ರೀಫ್ರೆಶ್/ಅಪ್‌ಡೇಶನ್ ಇದ್ದಲ್ಲಿ, ಹಣ ಸಂದಾಯವಾದ ತಾರೀಖಿನಿಂದ ಮುಂದಿನ 60  ದಿನಗಳ ಒಳಗೆ ಸಿಬಿಲ್/ಇತರ ಕ್ರೆಡಿಟ್ ಬ್ಯೂರೋಗೆ ಯಸ್ ಬ್ಯಾಂಕ್ ಸೂಚಿತಗೊಳಿಸುತ್ತದೆ.
- ಕಾಡ್‌ಮೆಂಬರ್ ಬಿಲ್ಲಿಂಗ್ ಬಗ್ಗೆ ವಿವಾದವನ್ನೆಬ್ಬಿಸಿ, ಯಸ್ ಬ್ಯಾಂಕ್ ಈ ಮೊದಲೇ ಅದು ಅನರ್ಹ ವಿವಾದವೆಂದು ಸೂಚಿತಗಳಿಸಿದ್ದರೆ, ಅಥವಾ ಅಂಥ ವಿವಾದಗಳಿಗಾಗಿ ಯಸ್ ಬ್ಯಾಂಕ್ ನಿಗದಿತಗೊಳಿಸಿರುವ ಕಟ್-ಆಫ್ ತಾರೀಖಿನ ನಂತರ ವಿವಾದವೆಬ್ಬಿಸಿದ್ದರೆ ಮತ್ತು/ಅಥವಾ ಅಂಥ ವಿವಾದವು ಪಾನ್ ಅಥವಾ ವನ್‌ಟೈಮ್ ಪಾಸ್‌ವರ್ಡ್ ಬಳಸಿದ ವ್ಯವಹಾರಕ್ಕೆ ಸಂಬಂಧಿಸಿದ್ದರೆ, ಅಂಥ ಕರ್ತವ್ಯ ಭ್ರಷ್ಟ ಕಾರ್ಡ್‌ಮೆಂಬರನ್ನೂ ಬ್ಯೂರೋಗೆ ವರದಿ ಮಾಡುವ ಅಧಿಕಾರವನ್ನು ಯಸ್ ಬ್ಯಾಂಕ್ ಕಾದಿರಿಸಿಕೊಂಡಿದೆ.
- ಅನ್ವಯಿಸುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ಮಾರ್ಗದರ್ಶಕಗಳ ಅನುಸಾರ ಯಸ್ ಬ್ಯಾಂಕ್ ತನ್ನ ಏಕೈಕ ನಿಷ್ಕರ್ಷೆಯ ಮೇರೆಗೆ ಭಾರತದಲ್ಲಾಗಲೀ ವಿದೇಶದಲ್ಲಾಗಲೀ ಉಪಸ್ಥಿತರಿರುವ ಮತ್ತು ವಾಸ್ತವಿಕವಾಗಿ ಯಸ್ ಬ್ಯಾಂಕ್ ಗ್ರೂಪ್‌ನವರಾಗಲೀ ತೃತೀಯ ಪಾರ್ಟಿಯನ್ನು ಯಸ್ ಬ್ಯಾಂಕ್ ನಿಯುಕ್ತಿಗೊಳಿಸಿರುವ ಸರ್ವಿಸ್ ಪ್ರೊವೈಡರ್‌ಗೆ ಕ್ರೆಡಿಟ್ ಕಾರ್ಡ್ ಕಾರ್ಯಾಚರಣೆಗಳಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಒಪ್ಪಿಸುವ ಅಧಿಕಾರವನ್ನೂ ಯಸ್ ಬ್ಯಾಂಕ್ ಕಾದಿರಿಸಿಕೊಂಡಿದೆ. ಯಾವುದೇ ನಿರ್ದಿಷ್ಟ ಸಮ್ಮತಿಯನ್ನು ಪಡೆಯದೇ ಕ್ರೆಡಿಟ್ ಕಾರ್ಡ್ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗಾಗಿ ಕಾರ್ಡ್‌ಮೆಂಬರ್‌ರ(ಗಳ) ಅಕೌಂಟ್/ಅಪ್ಲಿಕೇಶನ್‌ನ ವಿವರಗಳನ್ನು ಅಂಥ ಸರ್ವಿಸ್ ಪ್ರೊವೈಡರ್‌ಗಳಿಗೆ ಯಸ್ ಬ್ಯಾಂಕ್ ಒದಗಿಸಬಹುದು/ ಅವರೊಂದಿಗೆ ಹಂಚಿಕೊಳ್ಳಬಹುದು.
- ಕಾರ್ಡ್‌ಮೆಂಬರ್ ಮತ್ತು ಯಸ್ ಬ್ಯಾಂಕ್ ಪ್ರತಿನಿಧಿಯ ನಡುವೆ ಅಸಮಾಧಾನಕ್ಕೆ ಸಂಬಂಧಪಟ್ಟ ಮಾತುಕತೆ ಅಥವಾ ಹಣ ವಸೂಲಿಗೆ ಸಂಬಂಧಿಸಿದ ಮಾತುಕತೆ ಅಥವಾ ಅಗತ್ಯವೆಂದು ಯಸ್ ಬ್ಯಾಂಕ್ ನಿರ್ಧರಿಸುವ ಬೇರೆ ಯಾವುದೇ ನಿರ್ದಿಷ್ಟ ಮಾತುಕತೆಗಳನ್ನು ತಮ್ಮ ಸ್ವಂಥ ನಿಷ್ಕರ್ಷೆಯ ಮೇರೆಗೆ ಯಸ್ ಬ್ಯಾಂಕ್ ರೆಕಾರ್ಡ್ ಮಾಡುತ್ತದೆ ಎಂದು ಕೂಡ ಕಾರ್ಡ್‌ಮೆಂಬರ್‌ರಿಗೆ ತಿಳಿಸಲು ಬಯಸುತ್ತದೆ.
- ಆಯ್ದ ಕ್ರೆಡಿಟ್ ಕಾರ್ಡ್ ವೇರಿಯಂಟ್‌ಗಳೊಂದಿಗೆ ಗೌರವಾರ್ಥ ವಿಮೆಯ ಆವೃತಿಯೂ ಬರುತ್ತದೆ. ಪಾಲಿಸಿಯ ಆವೃತಿಯು ಕ್ರೆಡಿಟ್ ಕಾರ್ಡ್ ಸೆಟ್ ಅಪ್ ದಿನಾಂಕದಿಂದ ಶುರುವಾಗುತ್ತದೆ. ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ಆಹಿತಿಗಾಗಿ, ದಯವಿಟ್ಟು ಯಸ್ ಬ್ಯಾಂಕ್ ವೆಬ್‌ಸೈಟ್ ನೋಡಿರಿ.
- ಸಮಯ-ಸಮಯಕ್ಕೆ ಯಸ್ ಬ್ಯಾಂಕ್ ವಿಭಿನ್ನ ವೈಶಿಷ್ಟ್ಯಗಳು/ಉತ್ಪನ್ನಗಳು/ಪ್ರಮೋಶನಲ್ ಆಫರ್‌ಗಳ ಬಗ್ಗೆ ಸೂಚನೆ ನೀಡುತ್ತಲೇ ಇರುತ್ತಿದ್ದು ಕಾರ್ಡ್‌ಮೆಂಬರ್‌ಗಳಿಗೆ ಇದರಿಂದ ಗಮನೀಯ ಲಾಭದೊರಕುತ್ತದೆ ಮತ್ತು ಇದಕ್ಕಾಗಿ ತೃತೀಯ ಪಾರ್ಟಿ ಏಜನ್ಸಿಗಳ ಸೇವೆ ಪಡೆಯಲಾಗಮಹುದು. ಇಂಥ ಲಾಭಗಳ ಬಗ್ಗೆ ತಮಗೆ ಟೆಲಿಫೋನ್ ಕಾಲ್/ಎಸ್‌ಎಮ್‌ಎಸ್ ಮೂಲಕ ಮಾಹಿತಿ ನೀಡಬಾರದೆಂದು ಕಾರ್ಡ್‌ಮೆಂಬರ್ ಬಯಸಿದರೆ, ಆತ/ಆಕೆ 'ಡು ನಾಟ್ ಕಾಲ್' ಸೇವೆಗಾಗಿ ಸಬ್‌ಸ್ಕ್ರೈಬ್ ಮಾಡಬೇಕು. ಗ್ರಾಹಕ ಸೇವೆಗೆ ಕರೆ ಮಾಡಿ ಅಥವಾ **www.yesbank.in** ಭೇಟಿ ನೀಡಿ 'ಡು ನಾಟ್ ಕಾಲ್' ಸೇವೆಗಾಗಿ ಸಬ್‌ಸ್ಕ್ರೈಬ್ ಮಾಡಬೇಕು.
- ಭಾರತದಿಂದ ಹೊರಗೆ ನಿಮ್ಮ ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ವ್ಯವಹಾರಗಳನ್ನು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಎಕ್ಸ್‌ಚೇಂಜ್ ಕಂಟ್ರೋಲ್ ರೆಗ್ಯುಲೇಶನ್‌ಗಳು ಮತ್ತು ಫಾರೀನ್ ಎಕ್ಸ್‌ಚೇಂಜ್ ಮೆನೇಜ್‌ಮೆಂಟ್ ಆ್ಯಕ್ಟ್‌ನ್ನು ಅನುಮೋದಿಸುವಂತೆ ಕೈಗೊಳ್ಳಬೇಕು.ಭಾರತೀಯ ನಿವಾಸಿ ಕಾರ್ಡ್‌ಮೆಂಬರ್‌ಗೆ ಈ ಮೂಲಕ ತಿಳಿಸಲಾಗುವುದೇನೆಂದರೆ, ಇಲೆಕ್ಟ್ರಾನಿಕ್/ಇಂಟರ್‌ನೆಟ್ ಟ್ರೇಡಿಂಗ್ ಪೋರ್ಟಲ್‌ಗಳ ಮೂಲಕ ಭಾರತದಿಂದ ಹೊರಗೆ ಯಾವುದೇ ಮಾದರಿಯಲ್ಲಿ ಓವರ್‌ಸೀಸ್ ಫಾರೀನ್ ಎಕ್ಸ್‌ಚೇಂಜ್ ಟ್ರೇಡಿಂಗ್ ಪ್ರತ್ಯಕ್ಷವಾಗಿ/ಪರೋಕ್ಷವಾಗಿ ಹಣವನ್ನು ಪಡೆಯುವುದು ಮತ್ತು ಹಣ ಸಂದಾಯವನ್ನು ಸಾಧ್ಯಗೊಳಿಸುವುದು/ಮಾಡುವುದು ನಿಷೇಧಿತವಾಗಿದೆ ಮತ್ತು ಅಂಥ ವ್ಯವಹಾರಗಳನ್ನು ಮಾಡುವ ಕಾರ್ಡ್ ಧಾರಕರು ಫಾರೀನ್ ಎಕ್ಸ್‌ಚೇಂಜ್ ಮೆನೇಜ್‌ಮೆಂಟ್ ಆ್ಯಕ್ಟ್ (FEMA) 1999ರ ಉಲ್ಲಂಘನೆಗಾಗಿ ಆತನನ್ನು/ಆಕೆಯನ್ನು/ಅವರನ್ನು ಕಾನೂನಿನ ಕ್ರಮಕ್ಕೆ ಒಡ್ಡಿಕೊಳ್ಳುತ್ತಾರೆ ಮಾತ್ರವಲ್ಲ ನೋ ಯುವರ್ ಕಸ್ಟಮರ್ (KYC) ಗುಣಮಾನಗಳು/ಆ್ಯಂಟಿ ಮನಿ ಲಾಂಡರಿಂಗ್ (AML) ಮಾನಗಳಿಗೆ ಸಂಬಂಧಪಟ್ಟಂತೆ ನಿಯಂತ್ರಣಗಳ ಉಲ್ಲಂಘನೆಗೆ ದಾಯಿಯಾಗುತ್ತಾರೆ.ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನ ಬಳಕೆಯ ಫಲಸ್ವರೂಪವಾಗಿ ಉಂಟಾಗಬಹುದಾದ ಯಾವುದೇ ಎಕ್ಸ್‌ಚೇಂಜ್ ಕಂಟ್ರೋಲ್ ರೆಗ್ಯುಲೇಶನ್‌ಗಳ ಉಲ್ಲಂಘನೆಯು ವ್ಯಕ್ತಿಗತವಾಗಿ ಕೇವಲ ಯಸ್ ಬ್ಯಾಂಕ್ ಕಾರ್ಡ್‌ಮೆಂಬರ್‌ರ ಜವಾಬ್ದಾರಿಯಾಗಿರುತ್ತದೆ.
- ಇಂಟರ್‌ನ್ಯಾಶನಲ್ ಕ್ರೆಡಿಟ್ ಕಾರ್ಡ್‌ಗಳನ್ನು ಇಂಟರ್‌ನೆಟ್‌ನಲ್ಲಿ ಅಥವಾ ಲಾಟರಿ ಟಿಕೆಟ್, ಬ್ಯಾನ್ ಮಾಡಲಾದ ಅಥವಾ ನಿಷೇಧಿತ ಮ್ಯಾಗಜೀನ್‌ಗಳನ್ನು ಖರೀದಿಸಲು ಅಥವಾ ಸ್ವೀಪ್‌ಸ್ಟೆಕ್‌ಗಳಲ್ಲಿ ಭಾಗವಹಿಸಲು, ಎಲ್ಲಾ ಕಾಲ್‌ಬ್ಯಾಕ್ ಸರ್ವಿಸ್‌ಗಳು ಮತ್ತು/ಅಥವಾ ವಿದೇಶಿ ವಿನಿಮಯದ ವಿದ್‌ಡ್ರಾವಲ್‌ಗೆ ಅನುಮತಿ ಇಲ್ಲದಂಥ ವಸ್ತುಗಳು/ಚಟುವಟಕೆಗಳಂಥ ನಿಷೇಧಿತ ವಸ್ತುಗಳನ್ನು ಖರೀದಿಸಲು ಬಳಸಬಾರದು.

## ಚಾರ್ಜ್‌ಗಳ ಶೆಡ್ಯೂಲ್ - ಯಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ಸ್

<table>
<tr><th></th><th colspan="6">ಪ್ರಿಫರ್ಡ್/ಎನ್ಆರ್ಐಗಳಿಗಾಗಿ ಪ್ರಿಫರ್ಡ್/ಫಿಕ್ಸ್‌ಡ್ ಡಿಪಾಜಿಟ್ ವಿರುದ್ಧ ನೀಡಲಾದ ಪ್ರಿಫರ್ಡ್/<br>ಎಕ್ಸ್‌ಕ್ಲೂಸೀವ್/ಎನ್ಆರ್ಐಗಳಿಗಾಗಿ ಎಕ್ಸ್‌ಕ್ಲೂಸೀವ್/ಬಿಸ್‌ನೆಸ್</th></tr>
<tr><td>ಸೇರ್ಪಡೆಯ ಶುಲ್ಕ</td><td colspan="6">ಶೂನ್ಯ</td></tr>
<tr><td>ವಾರ್ಷಿಕ ಮೆಂಬರ್‌ಶಿಪ್ ಫೀ (ಪ್ರಥಮ ವರ್ಷ ಮತ್ತು ರಿನ್ಯೂವಲ್)</td><td colspan="6">ಪ್ರಿಫರ್ಡ್ /ಎನ್ಆರ್ಐಗಳಿಗಾಗಿ ಪ್ರಿಫರ್ಡ್ /ಫಿಕ್ಸ್‌ಡ್ ಡಿಪಾಜಿಟ್ ವಿರುದ್ಧ ನೀಡಲಾದ ಪ್ರಿಫರ್ಡ್ : ₹2500/-, ಎಕ್ಸ್‌ಕ್ಲೂಸೀವ್ /ಎನ್ಆರ್ಐಗಳಿಗಾಗಿ ಎಕ್ಸ್‌ಕ್ಲೂಸೀವ್ : ₹10,000/-, ಬಿಸ್‌ನೆಸ್: ₹5000 + ಅನ್ವಯಿಸುವ ತೆರಿಗೆಗಳು (ಮೊದಲ ವರ್ಷಕ್ಕೆ, ಶುಲ್ಕವನ್ನು ಪ್ರಥಮ ಸ್ಟೇಟ್‌ಮೆಂಟ್‌ನಲ್ಲಿ ಚಾರ್ಜ್ ಮಾಡಲಾಗುತ್ತದೆ. ಪ್ರತಿ ರಿನ್ಯೂವಲ್‌ಗಾಗಿ, ವಾರ್ಷಿಕ ಶುಲ್ಕವನ್ನು ರಿನ್ಯೂವಲ್‌ನ ನಂತರದ ಪ್ರಥಮ ಸ್ಟೇಟ್‌ಮೆಂಟ್‌ನಲ್ಲಿ ಚಾರ್ಜ್ ಮಾಡಲಾಗುತ್ತದೆ).</td></tr>
<tr><td>ವಾರ್ಷಿಕ ಚಾರ್ಜ್‌ಗಳನ್ನು ಮನ್ನಾ ಮಾಡಲಿಕ್ಕಾಗಿ ಖರೀದಿ ಷರತ್ತುಗಳು (ಕೇವಲ ರಿಟೇಲ್ ಖರೀದಿಯ ವ್ಯವಹಾರಗಳಿಗೆ ಅನ್ವಯಿಸುತ್ತದೆ)</td><td colspan="6">ಅನ್ವಯಿಸುವುದಿಲ್ಲ</td></tr>
<tr><td>ಬಡ್ಡಿ ರಹಿತ ಅವಧಿ</td><td colspan="6">50 ದಿನಗಳ ವರೆಗೆ</td></tr>
<tr><td>ಮಿನಿಮಮ್ ಅಮೌಂಟ್ ಡ್ಯೂ (MAD)</td><td colspan="6">ಸ್ಟೇಟ್‌ಮೆಂಟ್ ಅನುಸಾರ ಸಲ್ಲಬೇಕಾದ ಒಟ್ಟು ಮೊಬಲಗಿನ 5% ಅಥವಾ ₹200, ಇವುಗಳಲ್ಲಿ ಯಾವುದು ಹೆಚ್ಚೋ ಅದು</td></tr>
<tr><td>ಕ್ಯಾಶ್ ಅಡ್ವಾನ್ಸ್ ಲಿಮಿಟ್</td><td colspan="6">ಕ್ರೆಡಿಟ್ ಲಿಮಿಟ್‌ನ 30%</td></tr>
<tr><td>ಆ್ಯಡ್–ಆನ್ ಕಾರ್ಡ್ ಫೀ</td><td colspan="6">ಜೋಯ್ನಿಂಗ್ ಫೀ ಇಲ್ಲ , ವಾರ್ಷಿಕ ಫೀ ಇಲ್ಲ (ಗರಿಷ್ಠ 3 ಆ್ಯಡ್–ಆನ್ ಕಾರ್ಡ್‌ಗಳ ವರೆಗೆ ನೀಡಲಾಗುತ್ತದೆ)</td></tr>
<tr><td>ರಿವಾಲ್ವಿಂಗ್ ಕ್ರೆಡಿಟ್, ಕ್ಯಾಶ್ ಅಡ್ವಾನ್ಸ್ ಮತ್ತು/ಅಥವಾ ಓವರ್ ಡ್ಯೂ ಮೊಬಲಗಿನ ಮೇಲಿನ ಫೈನಾನ್ಸ್ ಚಾರ್ಜ್‌ಗಳು</td><td colspan="6">ಎಕ್ಸ್‌ಕ್ಲೂಸೀವ್/ಎನ್ಆರ್ಐಗಳಿಗಾಗಿ ಎಕ್ಸ್‌ಕ್ಲೂಸೀವ್: ಯಸ್ ಬ್ಯಾಂಕ್ ಸೇವಿಂಗ್ಸ್ ಅಕೌಂಟ್ ಅಥವಾ ಸ್ಯಾಲರಿ ಅಕೌಂಟ್ ಹೊಂದಿರುವವರಿಗಾಗಿ: 1.20% ಪ್ರತಿ ತಿಂಗಳು (ಅಂದರೆ 14.40% ವಾರ್ಷಿಕೀಕೃತ), ಇತರರಿಗೆ: 1.99% ಪ್ರತಿ ತಿಂಗಳು (ಅಂದರೆ 23.88% ವಾರ್ಷಿಕೀಕೃತ)<br>ಪ್ರಿಫರ್ಡ್/ಎನ್ಆರ್ಐಗಳಿಗಾಗಿ ಪ್ರಿಫರ್ಡ್: ಯಸ್ ಬ್ಯಾಂಕ್ ಸೇವಿಂಗ್ಸ್ ಅಕೌಂಟ್ ಅಥವಾ ಸ್ಯಾಲರಿ ಅಕೌಂಟ್ ಹೊಂದಿರುವವರಿಗಾಗಿ: 1.99% ಪ್ರತಿ ತಿಂಗಳು (ಅಂದರೆ 23.88% ವಾರ್ಷಿಕೀಕೃತ), ಇತರರಿಗೆ: 2.75% ಪ್ರತಿ ತಿಂಗಳು (ಅಂದರೆ 33.00% ವಾರ್ಷಿಕೀಕೃತ)<br>ಫಿಕ್ಸ್‌ಡ್ ಡಿಪಾಜಿಟ್ ವಿರುದ್ಧ ನೀಡಲಾದ ಪ್ರಿಫರ್ಡ್: 1.79% ಪ್ರತಿ ತಿಂಗಳು (ಅಂದರೆ 21.48% ವಾರ್ಷಿಕೀಕೃತ)<br>ಬಿಸ್‌ನೆಸ್ ಕಾರ್ಡ್ಸ್: ಯಸ್ ಬ್ಯಾಂಕ್ ಕರಂಟ್/ಸೇವಿಂಗ್ಸ್/ಬಿಸ್‌ನೆಸ್ ಅಕೌಂಟ್ ಹೊಂದಿರುವವರಿಗಾಗಿ: 1.99% ಪ್ರತಿ ತಿಂಗಳು (ಅಂದರೆ 23.88% ವಾರ್ಷಿಕೀಕೃತ), ಇತರರಿಗೆ: 2.75% ಪ್ರತಿ ತಿಂಗಳು (ಅಂದರೆ 33.00% ವಾರ್ಷಿಕೀಕೃತ)</td></tr>
<tr><td rowspan="2">ಲೇಟ್ ಪೇಮೆಂಟ್ ಚಾರ್ಜ್‌ಗಳು (LPC)<br>(ಸ್ಟೇಟ್‌ಮೆಂಟ್ ಬ್ಯಾಲೆಂಸ್ ಅನುಸಾರ , ಪ್ರತಿ ಸ್ಟೇಟ್‌ಮೆಂಟ್)</td><td>ಸ್ಟೇಟ್‌ಮೆಂಟ್ ಬ್ಯಾಲೆಂಸ್‌ಗಾಗಿ</td><td>< ₹100</td><td>₹101-500</td><td>₹501-5,000</td><td>₹5,001-20,000</td><td>> ₹20,000</td></tr>
<tr><td>ಎಲ್‌ಪಿಸಿ</td><td>ಶೂನ್ಯ</td><td>₹100</td><td>₹400</td><td>₹500</td><td>₹700</td></tr>
<tr><td>ಓವರ್‌ಲಿಮಿಟ್ ಫೀ</td><td colspan="6">ಓವರ್ ಲಿಮಿಟ್ ಮೊಬಲಗಿನ 2.5% ಅಥವಾ ₹500, ಯಾವುದು ಹೆಚ್ಚೋ ಅದು</td></tr>
<tr><td>ಕ್ಯಾಶ್ ಅಡ್ವಾನ್ಸ್ ಫೀ</td><td colspan="6">ವಿದ್‌ಡ್ರಾ ಮಾಡಲಾದ ಮೊಬಲಗಿನ 2.5% ಅಥವಾ ₹300, ಯಾವುದು ಹೆಚ್ಚೋ ಅದು</td></tr>
<tr><td>ಪೇಮೆಂಟ್ ರಿಟರ್ನ್ ಚಾರ್ಜ್‌ಗಳು : ಚೆಕ್/ಆಟೊ ಪೇ</td><td colspan="6">₹300 (ಪ್ರತಿ ಬಾರಿ ಚೆಕ್ ಅಥವಾ ಆಟೊ ಪೇ ರಿಟರ್ನ್ ಆದಾಗ)</td></tr>
<tr><td>ರಿವಾರ್ಡ್ ರಿಡಂಪ್ಶನ್ ಫೀ</td><td colspan="6">ಪ್ರತಿ ರಿಡಂಪ್ಶನ್ ಕೋರಿಕೆಗಾಗಿ ₹100 (ಎಕ್ಸ್‌ಕ್ಲೂಸೀವ್‌ಗಾಗಿ ಮನ್ನಾ ಮಾಡಲಾಗಿದೆ/<br>ಎನ್ಆರ್ಐಗಳಿಗಾಗಿ ಎಕ್ಸ್‌ಕ್ಲೂಸೀವ್)</td></tr>
<tr><td>ಭಾರತದಲ್ಲಿ ಎಲ್ಲಾ ಫ್ಯುಯೆಲ್ ಸ್ಟೇಶನ್‌ಗಳ ಫ್ಯುಯೆಲ್ ಸರ್ಚಾರ್ಜ್ ಮನ್ನಾ ಮಾಡುವಿಕೆ (ಸರ್ವಿಸ್ ಟ್ಯಾಕ್ಸ್ ಮತ್ತು ಫ್ಯುಯೆಲ್ ಸರ್ಚಾರ್ಜ್‌ನ ಮೇಲೆ ಹೇರಲಾಗುವ ಇತರ ಸೆಸ್ ಹಿಂತಿರುಗಿಸಲಾಗುವುದಿಲ್ಲ)</td><td colspan="6">ಕೇವಲ ₹400/-ರಿಂದ ₹5000/-ದ ನಡುವಿನ ವ್ಯವಹಾರಕ್ಕೆ ಮಾನ್ಯ. ಸ್ಟೇಟ್‌ಮೆಂಟ್ ಸೈಕಲ್‌ನಲ್ಲಿ ಗರಿಷ್ಠ ಮನ್ನಾ ಮಾಡುವಿಕೆ (ಪ್ರಿಫರ್ಡ್/ಎನ್ಆರ್ಐಗಳಿಗಾಗಿ ಪ್ರಿಫರ್ಡ್/ಫಿಕ್ಸ್‌ಡ್‌ಡಿಪಾಜಿಟ್ ವಿರುದ್ಧ ನೀಡಲಾದ ಪ್ರಿಫರ್ಡ್: ₹500/-, ಎಕ್ಸ್‌ಕ್ಲೂಸೀವ್/ಎನ್ಆರ್ಐಗಳಿಗಾಗಿ ಎಕ್ಸ್‌ಕ್ಲೂಸೀವ್/ಬಿಸ್‌ನೆಸ್: ₹1,000/-)</td></tr>
<tr><td>ಕಳೆದು ಹೋದ, ಕಳುವಾದ ಅಥವಾ ಹಾಳಾದ ಕಾರ್ಡ್ ಮರಳಿ ಇಶ್ಯೂ ಮಾಡಲು</td><td colspan="6">₹100 (ಪ್ರತಿ ಬಾರಿ ಇಶ್ಯೂ ಮಾಡಿದಾಗ)</td></tr>
<tr><td>ವಿದೇಶಿ ಹಣದ ವಿನಿಯಮ ಶುಲ್ಕ</td><td colspan="6">1.75%</td></tr>
<tr><td>ಔಟ್‌ಸ್ಟೇಶನ್ ಚೆಕ್ ಪ್ರೋಸೆಸಿಂಗ್ ಫೀ</td><td colspan="6">₹25 (ಪ್ರತಿ ಔಟ್‌ಸ್ಟೇಶನ್ ಚೆಕ್)</td></tr>
<tr><td>ಡ್ಯುಪ್ಲಿಕೇಟ್ ಸ್ಟೇಟ್‌ಮೆಂಟ್ (6 ತಿಂಗಳಿಗಿಂತ ಹಳೆಯ ಸ್ಟೇಟ್‌ಮೆಂಟ್)</td><td colspan="6">₹100 ಪ್ರತಿ ಸ್ಟೇಟ್‌ಮೆಂಟ್</td></tr>
<tr><td>ಕ್ರೆಡಿಟ್ ಕಾರ್ಡ್ ಪೇಮೆಂಟ್ ಬಾಬ್ತು ವೈಬಿಎಲ್ ಬ್ರಾಂಚ್‌ಗಳಲ್ಲಿ ನಗದು ಸಂದಾಯ</td><td colspan="6">₹100 (01/01/2017ರಂದು ಮತ್ತು ನಂತರ ನಗದು ಸಂದಾಯಕ್ಕಾಗಿ ಚಾರ್ಜ್ ಮಾಡಲಾಗುತ್ತಿದೆ)</td></tr>
<tr><td>ರೇಲ್ವೆ ಟಿಕೆಟ್‌ಗಳ ಖರೀದಿ ಅಥವಾ ಕ್ಯಾನ್ಸಲೇಶನ್‌ಗಾಗಿ ಚಾರ್ಜ್‌ಗಳು</td><td colspan="6">ಐಆರ್‌ಸಿಟಿಸಿ/ಇಂಡಿಯನ್ ರೇಲ್ವೇಸ್ ಶಿಫಾರಸು ಮಾಡಿರುವ ಅನುಸಾರ</td></tr>
<tr><td>ಗೂಡ್ಸ್ ಆ್ಯಂಡ್ ಸರ್ವಿಸ್ ಟ್ಯಾಕ್ಸ್</td><td colspan="6">18% (ಎಲ್ಲಾ ಫೀ ಮತ್ತು ಚಾರ್ಜ್‌ಗಳ ಮೇಲೆ ಅನ್ವಯಿಸುತ್ತದೆ)</td></tr>
</table>

ಯಸ್ ಬ್ಯಾಂಕ್

www.yesbank.in


**ಯಸ್ ಬ್ಯಾಂಕ್ ಲಿಮಿಟೆಡ್**

ವನ್ ಇಂಡಿಯಾ ಬುಲ್ಸ್ ಪಾರ್ಕ್, ನಂ. 14, 3ನೇ ಮೇನ್ ರೋಡ್, ಅಂಬತ್ತೂರ್ ಇಂಡಸ್ಟ್ರಿಯಲ್ ಎಸ್ಟೇಟ್, ಅಂಬತ್ತೂರ್, ಚೆನ್ನೈ – 600058.

24x7 ಯಸ್ ಟಚ್ ಕಸ್ಟಮರ್ ಕೇರ್ ನಂಬರ್‌ಗಳು :

1800 103 6000 (ಭಾರತದಲ್ಲಿ ಮೊಬೈಲ್ ಮತ್ತು ಲ್ಯಾಂಡ್‌ಲೈನ್‌ಗಳಿಗಾಗಿ ಟೋಲ್ ಫ್ರೀ)

+91 22 4935 0000 (ಭಾರತದ ಹೊರಗಿನಿಂದ ಕರೆ ನೀಡುವಾಗ)

ವೆಬ್‌ಸೈಟ್ : www.yesbank.in

ಈ–ಮೇಲ್ ಎಡ್ರೆಸ್ : yesfirstcc@yesbank.in